ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಣ ವಾರ್ತೆ

ಎಲ್ಲರೂ ಕಲಿಯೋಣ
ಸರ್ವಶಿಕ್ಷಣ ಅಭಿಯಾನ
ಎಲ್ಲರೂ ಬೆಳೆಯೋಣ

ಸಂಪುಟ – 7 ಸಂಚಿಕೆ – 1 ಜೂನ್ – 2007 ಆಂತರಿಕ ಪ್ರಸಾರ



ದಾಸೋಹವಿದು ಅಕ್ಷರದ ಬೀಡಿಗೆ
ಶಕ್ತಿಗಿದುವೆ ಹೂರಣ
ಕಲಿವ ಮಕ್ಕಳ ಒಳಿತಿಗೆ
ಯೋಜನೆಯ ವಿಸ್ತಾರಣ...

# 2007 ರ ಶಾಲಾ ಪ್ರಾರಂಭೋತ್ಸವ



## ಚಿತ್ರಸುದ್ದಿ

ದಿನಾಂಕ 01-06-07 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಡೇರಪುರ, (ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ)ದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಸದಸ್ಯರು ಮತ್ತು ಊರಿನ ಗ್ರಾಮಸ್ಥರು ಮತ್ತು ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರುಗಳೊಂದಿಗೆ ಶಾಲಾ ಸಮವಸ್ತ್ರ ಮತ್ತು ಪಠ್ಯಪುಸ್ತಕ ವಿತರಣಾ ಸಮಾರಂಭ, ಶಾಲಾ ಪ್ರಾರಂಭೋತ್ಸವ ಆಚರಿಸಲಾಯಿತು. ಮುಖ್ಯ ಶಿಕ್ಷಕರಾದ ಚಂದ್ರಪ್ಪ ಕೆ. ಸ್ವಾಗತಿಸಿದರು. ಊರಿನ ಪೋಷಕರು ಮತ್ತು ಗ್ರಾಮದ ಮುಖಂಡರು ಹಾಜರಿದ್ದರು.

– ಕೆ. ಚಂದ್ರಪ್ಪ, ಮು.ಶಿ



ಬಾಗಲಕೋಟೆ ಜಿಲ್ಲೆ ಬಾದಾಮಿ ಸರಕಾರಿ ಮಾದರಿ ಶಾಲೆ ಹಾಗೂ ಬಾಲಕಿಯರ ಶಾಲೆ ಸಂಯುಕ್ತವಾಗಿ "ಶಾಲಾ ಪ್ರಾರಂಭೋತ್ಸವ ಹಾಗೂ ಪಠ್ಯ ಪುಸ್ತಕ ವಿತರಣೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು.

ಮಾದರಿ ಶಾಲೆ ಮುಖ್ಯೋಪಾಧ್ಯಾಯ ನಾಗರಾಜ ಹ. ಹೊಸಮನಿ ಬಾಲಕಿಯರ ಶಾಲೆ ಮುಖ್ಯೋಪಾಧ್ಯಾಯಿನಿ ಮಾಲಾ ಎನ್. ಹೊಸಮನಿ ಸಿ.ಆರ್.ಸಿ. ಸಂಪನ್ಮೂಲ ವ್ಯಕ್ತಿ ಸೈದುಸಾಬ ಮ. ನದಾಫ್ ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಶಾಲಾ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

– ನಾಗರಾಜ ಹ. ಹೊಸಮನಿ ಮು.ಶಿ.



ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನೀಡಲಾದ ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳನ್ನು ಗ್ರಾಮಪಂಚಾಯಿತಿ ಸದಸ್ಯರಾದ ಜಿ.ಎಂ. ಮಲ್ಲೇಶ ನೀಡಿದರು. ನೋಟ್ ಪುಸ್ತಕಗಳನ್ನು ಎಸ್‌ಡಿ.ಎಂ.ಸಿ. ಅಧ್ಯಕ್ಷರಾದ ನಟರಾಜ್ ನೀಡಿದರು.

7ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ನಾಗೇಂದ್ರ ಎಂಬ ವಿದ್ಯಾರ್ಥಿಗೆ 'ಆಂದೋಲನ' ದಿನಪತ್ರಿಕೆ ವತಿಯಿಂದ 1000ರೂ. ಪ್ರೋತ್ಸಾಹಧನವನ್ನು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಕೆ. ಮರಿಗೌಡರವರು ವಿತರಿಸಿದರು. ಕ್ಷೇತ್ರಶಿಕ್ಷಣಾಧಿಕಾರಿಗಳಾದ ಪುರುಷೋತ್ತಮ, ಎಸ್.ಡಿ.ಎಂ.ಸಿ.ಅಧ್ಯಕ್ಷರಾದ ಜಿ.ನಟರಾಜ, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರಾದ ಹೆಬ್ಬಾಳೇಗೌಡರು ಹಾಗೂ ಪಂಚಾಯಿತಿ ಮತ್ತು ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಿ.ವಿ.ನಾಗೇಶ್ ಮುಖ್ಯ ಶಿಕ್ಷಕರು
ಸ.ಹಿ.ಪ್ರಾ.ಶಾಲೆ, ಗೆಜ್ಜಗಳ್ಳಿ



2007ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವವು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮಾಯಸಂದ್ರದಲ್ಲಿ ದಿನಾಂಕ 30.5.07 ರಂದು ಸಡಗರದಿಂದ ಆಚರಿಸಲ್ಪಟ್ಟಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮನ್ವಯಾಧಿಕಾರಿಗಳು, ತಾಲ್ಲೂಕು ಪಂಚಾಯ್ತಿ ಸದಸ್ಯರು, ಗ್ರಾಮ ಪಂಚಾಯ್ತಿ ಅಧ್ಯಕ್ಷರು ಎಸ್.ಡಿ. ಎಂ.ಸಿ. ಅಧ್ಯಕ್ಷರು, ಸಿ.ಆರ್.ಪಿ., ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ ವಿತರಣೆ ಮಾಡಲಾಯಿತು.

– ಡಿ.ನರಸಿಂಹಯ್ಯ
ಸಮೂಹ ಸಂಪನ್ಮೂಲ ಕೇಂದ್ರ, ಮಾಯಸಂದ್ರ

# ಚಿತ್ರಸುದ್ದಿ



ದಿನಾಂಕ 31-5-2007 ರಂದು ಬೆಳಿಗ್ಗೆ 11.00 ಘಂಟೆಗೆ ಬೆಂಗಳೂರು ದ. ವಲಯ 2ರ ಅತ್ತಿಗುಪ್ಪೆ ಸರ್ಕಾರಿ ಕನ್ನಡ ಮಾದರಿ ಶಾಲೆಯಲ್ಲಿ 2007ನೇ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಅಂಗವಾಗಿ ಬೆಳಿಗ್ಗೆ 9.00 ಕ್ಕೆ ಶಾಲಾ ವಲಯದಲ್ಲಿ ಮಕ್ಕಳ ಜಾಥಾ ನಡೆಸಲಾಯಿತು. ಶಾಲಾ ಎಸ್.ಡಿ.ಎಂ.ಸಿ. ಸದಸ್ಯರು, ಪೋಷಕರು, ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ. ಗೋಪಾಲಕೃಷ್ಣರವರು ಭಾಗವಹಿಸಿದ್ದರು. ವಿ.ಎಸ್.ಎಸ್. ಗ್ರೂಪ್ ಆಫ್ ಎಜುಕೇಷನ್ ಮುಖ್ಯಸ್ಥರಾದ ಡಾ|| ಅರುಣ್‌ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಇಲಾಖೆಯಿಂದ ಸರಬರಾಜಾದ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕ ಗಳನ್ನು ಅತಿಥಿಗಳಿಂದ ಮಕ್ಕಳಿಗೆ ವಿತರಿಸಲಾಯಿತು. ಮಕ್ಕಳು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಮಕ್ಕಳನ್ನು ಸಿಹಿ ಹಂಚಿಕೆಯ ಮೂಲಕ ಆತ್ಮೀಯವಾಗಿ ಶಾಲೆಗೆ ಬರಮಾಡಿಕೊಳ್ಳಲಾಯಿತು.

– ಟಿ. ಶೇಷು. ಮು.ಶಿಕ್ಷಕರು





ಸರ್ಕಾರಿ ಶಾಸಕರ ಮಾದರಿ ಶಾಲೆ ನಂ 1. ಬಾದಾಮಿ ಬಾಗಲಕೋಟೆ ಜಿಲ್ಲೆ, ಇಲ್ಲಿ 2007ರ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಶಾಸಕರಾದ ಮಾನ್ಯ ಪಟ್ಟಣಶೆಟ್ಟಿಯವರು ಸಂಸದರಾದ ಮಾನ್ಯ ಪಿ.ಸಿ. ಗದ್ದಿಗೌಡರೊಂದಿಗೆ ಪ್ರಾರಂಭೋತ್ಸವದ ಉದ್ಘಾಟನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಇದೇ ಸಂದರ್ಭದಲ್ಲಿ ಮಕ್ಕಳಿಗೆ ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳನ್ನು ಮುಖ್ಯಅತಿಥಿಗಳು ವಿತರಿಸಿದರು.

* * * * * *



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವೀರಾಪುರ ತಾ.ಜಿ. ಬಾಗಲಕೋಟೆ, ಇಲ್ಲಿ 2007ನೇ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು ಮೆರವಣಿಗೆ ಮೂಲಕ ಮಕ್ಕಳು ಹಾಗೂ ಶಿಕ್ಷಕರು ಪೋಷಕರೊಡಗೂಡಿ ಆಚರಿಸಿದರು.

ಕಾರ್ಯಕ್ರಮದಲ್ಲಿ ಊರಿನ ಗಣ್ಯರು ಎಸ್.ಡಿ.ಎಂ.ಸಿ. ಸದಸ್ಯರು ಪಾಲ್ಗೊಂಡಿದ್ದರು. ಇದೇ ಸಮಯದಲ್ಲಿ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು.

– ಎನ್.ಹೆಚ್.ನಾಗೂರ

ಶಿಕ್ಷಣಾಧಿಕಾರಿಗಳು,

## ತಿಂಗಳ ಪದ

# 'ಅಕ್ಷರ ದಾಸೋಹ'



ದಾಸೋಹವಿದು ಅಕ್ಷರ ದಾಸೋಹವಿದು
ನಮ್ಮ ಘನ ಸರ್ಕಾರದ ತೀರ್ಮಾನವಿದು..
ಜ್ಞಾನ ದೇಗುಲದಿ ನಿತ್ಯೋತ್ಸವ
ಜ್ಞಾನದಾಸೋಹ ಇದು ಅನ್ನದಾಸೋಹ

ಚಿಣ್ಣರ ಜೊತೆಗೆ ಅಣ್ಣರಿಗೂ ಬಿಸಿಊಟ
ಕಲಿಯುವ ಮಕ್ಕಳಿಗೆ ಸಮಾನತೆ ಪಾಠ
ಸಹಬಾಳ್ವೆಯ ಸಂಭ್ರಮ.....

ಸರಕಾರದ ಕೊಡುಗೆ ಇದು ವಿನೂತನ
ಹಸಿದೊಡಲಿಗೆ ಬಿಸಿಯೂಟದ ಸಾಂತ್ವನ
ಸದೃಢ ಪೀಳಿಗೆಗಾಹ್ವಾನ...

ದಾಸೋಹವಿದು ಅಕ್ಷರ ದಾಸೋಹವಿದು
ನಮ್ಮ ಘನ ಸರ್ಕಾರದ ತೀರ್ಮಾನವಿದು...
ಅಕ್ಷರ ದಾಸೋಹ ಅನ್ನದಾಸೋಹ
ಜ್ಞಾನದಾಸೋಹ ನಿತ್ಯದಾಸೋಹ



ಕಮಲಕುಮಾರಿ
ಪ್ರ.ದ.ಸ.
ಸಹ ನಿರ್ದೇಶಕರ ಕಛೇರಿ,
(ಮ.ಊ.ಯೋ)



ಪ್ರೌಢ ಶಾಲಾ ಮಕ್ಕಳಿಗೆ ಅಕ್ಷರ ದಾಸೋಹದ ಉದ್ಘಾಟನೆಯಂದು ಹಾಡಿದ ಗೀತೆ,
ಹಾಡಿದವರು : ಅರ್ಚಕರಹಳ್ಳಿ ಶ್ರೀ ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ವಸತಿ ಶಾಲೆ (ಅಂಧರ) ಹಾಗೂ
ಬಿಎಸ್‌ಬಿಪಿ ಶಾಲಾ ಮಕ್ಕಳು

ಸಂಗೀತ – ಗೀತಾ ಕೆ.ಜಿ.

www.scooleducation.kar.nic.in
Published by : commissioner for Public Instruction and State Project Director, Sarva Shikshana Abhiyana, Karnataka
Nrupatunga Road, Bengaluru-560 001. Ph : 080 - 2224 6976
Printed at : Abhimaani Publication Ltd., Dr. Rajkumar Road, Rajajingar, Bengaluru - 560 010, Ph : 23123141



# ಅಕ್ಷರ ದಾಸೋಹದ ವಿಸ್ತರಣೆ....

ಕರ್ನಾಟಕ ಸರ್ಕಾರ ಪ್ರಾ.ಶಿ.ಇ. ಹಾಗೂ ಬೆಂ.ಗ್ರಾ. ಜಿಲ್ಲಾ ಪಂಚಾಯತ್‌ನ ಸಹಯೋಗದಲ್ಲಿ ರಾಜ್ಯಮಟ್ಟದ ಅಕ್ಷರದಾಸೋಹ ವಿಸ್ತರಣೆ, ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದ ಬಗ್ಗೆ ಸಂಕ್ಷಿಪ್ತ ವರದಿ

ಬೆಂಗಳೂರು ಗ್ರಾ. ಜಿಲ್ಲೆಯ ರಾಮನಗರ ತಾಲ್ಲೂಕಿನ ಅವ್ವೇರಹಳ್ಳಿ ಸ. ಪ್ರೌಢಶಾಲಾ ಆವರಣದಲ್ಲಿ ದಿನಾಂಕ 13.06. 2007 ಮಧ್ಯಾಹ್ನ 3 ಗಂಟೆಗೆ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿನ 8 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಅಕ್ಷರ ದಾಸೋಹ ವಿಸ್ತರಣೆಯ ಉದ್ಘಾಟನೆ ಕಾರ್ಯಕ್ರಮವು ಜರುಗಿತು.

ಮಾನ್ಯ ಬಸವರಾಜ ಎಸ್. ಹೊರಟ್ಟಿ ಶಿಕ್ಷಣ ಸಚಿವರು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಇವರ ಘನ ಅಧ್ಯಕ್ಷತೆಯಲ್ಲಿ ಮಾನ್ಯ ಹೆಚ್. ಡಿ. ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿ ಗಳು ಇವರು ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ದೀಪ ಬೆಳಗಿಸಿ ಉದ್ಘಾಟಿಸಿದರು. ಬಿಸಿಯೂಟವನ್ನು ತಮ್ಮ ಕೈಯ್ಯಾರೆ ಮಕ್ಕಳಿಗೆ ಬಡಿಸಿದರು. ಸನ್ಮಾನ್ಯ ಸಚಿವರಾದ ರಾಮಚಂದ್ರಗೌಡ ಮತ್ತು ಬಸವರಾಜ ಎಸ್. ಹೊರಟ್ಟಿಯವರ ಜೊತೆಗೆ ಮಕ್ಕಳೊಡನೆ ಕುಳಿತು ಆನಂದದಿಂದ ಬಿಸಿಯೂಟ ಸವಿದರು. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳಾದ ಡಿ. ರಂಗಸ್ವಾಮಿ ಅವರು ಹಾಗೂ ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಎಲ್. ಕೆ. ಅತೀಕ್ ಇವರುಗಳೂ ಮಕ್ಕಳೊಂದಿಗೆ ಬಿಸಿಯೂಟ ಸವಿದರು.

ದಾಸೋಹಗೀತೆಯನ್ನು ಶಾಲಾ ಮಕ್ಕಳು ಸುಶ್ರಾವ್ಯವಾಗಿ ಹಾಡಿ ಮುದನೀಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ನಾಡಗೀತೆಗೆ ಎಲ್ಲರೂ ಗೌರವಾರ್ಪಣೆ ಸಲ್ಲಿಸಿದನಂತರ ಜಿ.ಎಂ. ವಿಜಯಭಾಸ್ಕರ್, ಕಾರ್ಯದರ್ಶಿಗಳು ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಬಿಸಿಯೂಟವನ್ನು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೂ ವಿಸ್ತರಿಸುವ ಕುರಿತು ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಇದರಿಂದ ಆಗುವ ಸೌಲಭ್ಯಗಳು, ಮತ್ತಿತರ ಅನುಕೂಲಗಳನ್ನು ಸಭೆಗೆ ವಿವರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ಕುಮಾರಸ್ವಾಮಿ ಅವರು ಇಂತಹ ಅಭಿವೃದ್ಧಿ ಕಾರ್ಯಗಳಿಂದ ಒಳ್ಳೆಯ ಸಮಾಜ ಸೃಷ್ಟಿಯಾಗುವುದರ ಜೊತೆಗೆ ನಮ್ಮ ಯುವ ಪೀಳಿಗೆಯವರು ಪೌಷ್ಠಿಕ ಆಹಾರ ಸೇವಿಸಿ ಆರೋಗ್ಯವಾಗಿದ್ದು ಉತ್ತಮ ಶಿಕ್ಷಣ ಪಡೆದು ಸಮಾಜಕ್ಕೆ ಯೋಗ್ಯ ರೀತಿಯಲ್ಲಿ ಕೊಡುಗೆಯಾಗ ಬೇಕೆಂದು ತಿಳಿಸಿದರು. 1ನೇ ತರಗತಿಯ ಆಂಗ್ಲ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ವಿತರಿಸಿದರು.

ಮಾನ್ಯ ರಾಮಚಂದ್ರಗೌಡ, ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಾತನಾಡಿ ಇಂದಿನ ಮಕ್ಕಳೇ ನಾಳಿನ ಪ್ರಜೆಗಳಾಗುವವರು ಇವರು ಸದೃಢರಾಗಿ ಭವ್ಯ ಸಮಾಜ ನಿರ್ಮಾಣವಾಗಲು ಶಿಕ್ಷಣ ಅತಿ ಮುಖ್ಯ. ಇದಕ್ಕಾಗಿ ಸರ್ಕಾರ ಅನೇಕ ಸೌಲಭ್ಯಗಳನ್ನು ಮಕ್ಕಳಿಗೆ ನೀಡುತ್ತಿರುವುದು ಸ್ವಾಗತಾರ್ಹ ಎಂದು ನುಡಿದು ಸರ್ಕಾರ ನಡೆಸಿಕೊಂಡು ಬರುತ್ತಿರುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಸರ್ಕಾರವನ್ನು ಶ್ಲಾಘಿಸಿ ಅಭಿನಂದಿಸಿದರು. ಎಲ್ಲರಿಗೂ ಶುಭ ಹಾರೈಸಿದರು.

ಪ್ರಾ.ಶಿ. ಇಲಾಖೆಯ ಮಧ್ಯಾಹ್ನ ಉಪಹಾರ ಯೋಜನೆಯ ಸಹ ನಿರ್ದೇಶಕರಾದ ಡಿ. ರಾಜಣ್ಣ ಅವರು ವಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮವು ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿತು.

ಒಟ್ಟು ಫಲಾನುಭವಿಗಳ ಸಂಖ್ಯೆ

ಪ್ರಾಥಮಿಕ ಶಾಲೆಗಳು : ಸರ್ಕಾರಿ ಪ್ರಾ. ಶಾಲೆಗಳು 43, 414
ಅನುದಾನಿತ ಶಾಲೆಗಳು 2830,

ಪ್ರೌಢಶಾಲೆಗಳು : ಸರ್ಕಾರಿ 3574
ಅನುದಾನಿತ 2536,

ಫಲಾನುಭವಿಗಳು : ಪ್ರಾಥಮಿಕ ಶಾಲಾ ಮಕ್ಕಳು - 53.58 ಲಕ್ಷ,
ಪ್ರೌಢಶಾಲಾ ಮಕ್ಕಳು 12.18 ಲಕ್ಷ.

- ಕೆ.ಜಿ. ರೀಟಾ
ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು. ಪ್ರಾ.ಶಿ.ಇ.





# ಸೈಕಲ್ ಕೊಡುಗೆ ಸಾರ್ಥಕ

ಶಾಲೆಗೆ ಬರುವ ಕಷ್ಟ ಯಾರಿಗೂ ತಿಳಿಯದ್ದಲ್ಲ. ಅದರಲ್ಲೂ ಮಲೆನಾಡಿನ ಗುಡ್ಡಬೆಟ್ಟಗಳನ್ನು ಏರಿ ಇಳಿದು ಶಾಲೆಗೆ ಬರುವುದೆಂದರೆ ದಿನನಿತ್ಯದ ಸಾಹಸವೇ ಸರಿ. ಈ ಗುಡ್ಡಗಾಡಿನ ಮಕ್ಕಳಿಗೆ ಕಲಿಕೆಯೊಂದಿಗೆ ಮನೆಗೆಲಸವನ್ನುಮಾಡುವುದು ಅನಿವಾರ್ಯ. ದನಕಾಯುವುದು.

ಹೆಣ್ಣು ಮಕ್ಕಳಿಗೆ ಸೈಕಲ್ ಕೊಡುಗೆ ಸಾರ್ಥಕ ಎಂಬುದರ ಪ್ರತ್ಯಕ್ಷ ಅನುಭವ ಪ್ರಾಥಮಿಕ ಶಿಕ್ಷಣ ನಿರ್ದೇಶಕರಾದ ಟಿ. ಚಂದ್ರಶೇಖರ್ ರವರಿಗೆ ಸಂದರ್ಭವೊಂದು ಹೀಗಿದೆ.

ಮಾನ್ಯ ಪ್ರಾಥಮಿಕ ನಿರ್ದೇಶಕರು ಶಿವಮೊಗ್ಗ ಜಿಲ್ಲೆಯ ಪ್ರವಾಸದಲ್ಲಿದ್ದಾಗ ಸಾಗರ ತಾಲ್ಲೂಕಿನ ತುಮರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೈಕಲ್ ಮೇಲೆ ಹೋಗುತ್ತಿದ್ದ ಹೆಣ್ಣುಮಕ್ಕಳು ದಾರಿಯಲ್ಲಿ ಕಂಡರು. ಸೈಕಲ್‌ಗಳ ಮೇಲೆ ಶಿಕ್ಷಣ ಇಲಾಖೆಯ ಲಾಂಛನ ಕಂಡು ನಿರ್ದೇಶಕರು ಕಾರಿನಿಂದಿಳಿದರು. ವಿಚಾರಿಸಿದಾಗ 4-5 ಮೈಲಿಗಳ ದೂರದಿಂದ ಬಹಳ ಪ್ರಯಾಸದಿಂದ ಬರುತ್ತಿದ್ದ ನಮಗೆ ಸೈಕಲ್‌ಗಳ ಕೊಡುಗೆ ನಮಗೆ ಬಹಳ ಉಪಯುಕ್ತವಾಗಿದೆ ಎಂದು ತಿಳಿಸಿದರು.

ತಾವು ಮಾತನಾಡುತ್ತಿರುವುದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಎಂಬುದು ಆ ಮುಗ್ಧ ಮಕ್ಕಳಿಗೆ ತಿಳಿಯದು. ಆ ಮಕ್ಕಳ ಮುಖದ ಮೇಲಿನ ನಗು ಸೈಕಲ್ ಕೊಡುಗೆ ಪರಿಣಾಮ ಸಾರ್ಥಕ ಎನ್ನಿಸಿತು.

ಗ್ರಾಮಾಂತರ ಪ್ರದೇಶದ ಮಕ್ಕಳು ಮಳೆ ಬಿಸಿಲು ಎನ್ನದೆ ಕಾಡು ಹಾದಿಯಲ್ಲಿ ನಡೆದುಕೊಂಡು 5-6 ಕಿ.ಮೀ. ಕ್ರಮಿಸಿ ಹೊಲಗದ್ದೆಗಳ ಕೆಲಸ, ದನಕ್ಕೆ ಮೇವು ತರುವುದು, ತೋಟದ ಕೆಲಸ ಹೀಗೆ ಬಿಡುವಿಲ್ಲದ ಕೆಲಸಗಳ ನಡುವೆ ಶಾಲೆಗೆ ಹೋಗಿ ಬರುವ ಸಮಯದ ಉಳಿತಾಯಕ್ಕೆ ಶ್ರಮದ ಉಳಿತಾಯಕ್ಕೆ ಸೈಕಲ್ ಕೊಡುಗೆ ಒಂದು ವಿಶೇಷವೇ. ಅದರಲ್ಲೂ ಹೆಣ್ಣುಮಕ್ಕಳು ಶಾಲೆ ದೂರ, ಮನೆಗೆಲಸಕ್ಕೆ ತಡವಾಗುತ್ತದೆ.ಅಷ್ಟು ದೂರ ನಡೆಯಲು ಅಸಾಧ್ಯ - ಎಂದೆಲ್ಲ ಕಾರಣಗಳನ್ನು ಕೊಡುವುದನ್ನು ಸೈಕಲ್ ಕೊಡುಗೆ ನಿವಾರಿಸಿ, ಅವರ ಓದಿಗೆ ಸಹಕರಿಸಿದೆ. ಆ ಹೆಣ್ಣುಮಕ್ಕಳ ಮುಖದ ಮೇಲಿಂದು ದೇಹಾಯಾಸದ ಗುರುತಿಲ್ಲ. ಕಲಿಯಲು ಲವಲವಿಕೆ ಮೂಡಿದೆ. ದೂರದ ಹೆಣ್ಣುಮಕ್ಕಳು ಶಾಲೆಗೆ ಬರುವಂತೆ ಮಾಡಿದೆ. ಕೊಡುಗೆ ಸಾರ್ಥಕವಾಗಿದೆ.

ನಿರ್ದೇಶಕರೊಂದಿಗೆ ಸಾಗರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭು ಎಸ್.ಹುಣಗಾರ್, ಉಪಸಮನ್ವಯಾಧಿಕಾರಿ ಶಂಕರಪ್ಪ, ಶಿವಮೊಗ್ಗ ಜಿಲ್ಲಾ ಶಿಕ್ಷಣಾಧಿಕಾರಿ ಫಾಲಾಕ್ಷ ಇವರುಗಳು ಜೊತೆಯಲ್ಲಿದ್ದರು.



# ಪ್ರಾಥಮಿಕ ಶಾಲಾ ಶಿಕ್ಷಕರ ಕೌನ್ಸಲಿಂಗ್

ಬಾಗಲಕೋಟೆ ಜಿಲ್ಲೆಯಲ್ಲಿ 2006-07ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯ ಅಂತಿಮ ಪಟ್ಟಿಯಲ್ಲಿ ಆಯ್ಕೆ ಆಗಿರುವ ಕನ್ನಡ ಸಾಮಾನ್ಯ ಹುದ್ದೆಯ 150, ಸಾಮಾನ್ಯ ವಿಜ್ಞಾನ ಹುದ್ದೆಯ 27, ಇಂಗ್ಲೀಷ್ ಹುದ್ದೆಯ 06 ಹಾಗೂ ಉರ್ದು ಭಾಷೆ ಹುದ್ದೆಯ 06 ಹೀಗೆ ಒಟ್ಟು 189 ಹುದ್ದೆಗಳಿಗೆ ದಿನಾಂಕ 31-5-2007 ರಂದು ಕೌನ್ಸಲಿಂಗ್ ಮಾಡಿ ಸ್ಥಳಗಳನ್ನು ನಿಯುಕ್ತಿಗೊಳಿಸಲಾಯಿತು. ಸದರಿ ಅವಧಿಯಲ್ಲಿ ಜಿಲ್ಲೆಯ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮಪ್ಪ ನಾಯಕ ಭಾ.ಆ.ಸೇ. ರವರು ಕನ್ನಡ ಸಾಮಾನ್ಯ ಹುದ್ದೆಯ ಅಂಗವಿಕಲ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಿ, ಉತ್ತಮವಾಗಿ ಕಾರ್ಯವನ್ನು ನಿರ್ವಹಿಸಿ ಉತ್ತಮ ಪ್ರಜೆಗಳನ್ನು ತಯಾರಿಸುವಲ್ಲಿ ಶ್ರಮವಹಿಸಿರಿ ಎಂದು ಹಾರೈಸಿದರು. ಇದೇ ಸಂದರ್ಭದಲ್ಲಿ ಜಿಲ್ಲೆಯ ಪ್ರಭಾರಿ ಉಪನಿರ್ದೇಶಕರಾದ ಎಸ್. ಎನ್. ಪೋಲೀಸ್ ಪಾಟೀಲ್ ಹಾಗೂ ಶಿಕ್ಷಣಾಧಿಕಾರಿಗಳು ಹಾಗೂ ಪ್ರಾಶಾಶಿನೇ ನೋಡಲ್ ಅಧಿಕಾರಿಗಳಾದ ಎನ್. ಎಚ್. ನಾಗೂರರವರು ಮತ್ತು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

– ಎನ್.ಎಚ್.ನಾಗೂರ, ಶಿಕ್ಷಣಾಧಿಕಾರಿಗಳು

# ದಾನಿಗಳಿದ್ದಲ್ಲಿ ಎಲ್ಲವೂ ಸಾಧ್ಯ....

## ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಪಾಠಶಾಲೆ ಬಿ. ಚನ್ನಸಂದ್ರ ಬೆಂಗಳೂರು ಉತ್ತರ ವಲಯ -3



ಮಕ್ಕಳು ಕಲಿಯುವ ಶಾಲೆಯಲ್ಲಿ ಬಣ್ಣಬಣ್ಣದ ಕೋಟೆಯನ್ನು ಎಲ್ಲಾದರೂ ನೋಡಿದ್ದೀರಾ? ಈಕೋಟೆಯಲ್ಲಿ ಮಕ್ಕಳು ಅವಿತುಕೊಳ್ಳಲು ಜಾಗವುಂಟು. ಅಂದದ ಗೋಪುರವುಂಟು. ಬರೆಯಲು ಕಪ್ಪುಹಲಗೆ, ಬಣ್ಣದ ಬರಹ ಎಲ್ಲವೂ ಉಂಟು. ಈ ಸುಂದರ ಕಲ್ಪನೆ ಅರಳಿದ್ದು ಮುಖ್ಯ ಶಿಕ್ಷಕಿ ಎನ್.ನಾಗರತ್ನಮ್ಮ ಇವರ ಮನದಲ್ಲಿ. ಕಲ್ಪನೆಗೆ ಮೂರ್ತರೂಪವನ್ನೂ ನೀಡಿದರು. ಸುಮಾರು 10 ಲಕ್ಷರೂ ವೆಚ್ಚದಲ್ಲಿ ಶಾಲೆಯ ಪುನರ್ನಿರ್ಮಾಣದೊಂದಿಗೆ ಈ ಕೋಟೆಯೂ ಸೇರಿತು. 'ಮಕ್ಕಳ ಸೈನ್ಯ' ಈ ಕೋಟೆಯಲ್ಲಿ ಆನಂದದಿಂದ ಕಲಿಯುವ, ದೃಶ್ಯ ಮನೋಹರ.

ಅಷ್ಟೇಅಲ್ಲ. ವಿಶಿಷ್ಟವಾಗಿ ನಿರ್ಮಿಸಿದ ಭೋಜನಶಾಲೆ ಅಕ್ಕರದಾಸೋಹದ ಅರಮನೆಯಾಗಿದೆ. ಪ್ರಾಯಶಃ ಬೇರೆಯಾವುದೇ ಸರ್ಕಾರಿ ಶಾಲೆಯಲ್ಲಿ ಇಷ್ಟು ಸುಸಜ್ಜಿತ ಅಂದದ ಭೋಜನ ಶಾಲೆ ಇಲ್ಲ. ದಾನಿ ಟಿ.ಡಿ.ರಾಮಕೃಷ್ಣರ ಕೊಡುಗೆ ಇಲ್ಲಿ ಸಾರ್ಥಕವಾಗಿದೆ. ದಾನಿಗಳು, ಎಸ್.ಡಿ.ಎಂ.ಸಿ.ಯವರ ನೆರವಿನಲ್ಲಿ ಶಾಲೆಯನ್ನು ಸುಂದರಗೊಳಿಸಿದ ನಾಗರತ್ನಮ್ಮನವರ ಶ್ರಮ ಅನೂಹ್ಯ.

ಇವನ್ನೆಲ್ಲನಾವು ನೋಡುವ ಶಾಲೆ ಬೆಂಗಳೂರು ಉತ್ತರವಲಯ ಮೂರರ **ಬಿ. ಚನ್ನಸಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ** ಅತ್ಯುತ್ತಮ ಮಾದರಿ ಶಾಲೆಯಾಗಿ ರೂಪುಗೊಂಡಿರುತ್ತದೆ. ಶಾಲೆಯ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ ನೀಡುವ ದೆಸೆಯಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿದೆ,

ಅತ್ಯುತ್ತಮ ಕೊಠಡಿಗಳನ್ನು, ಪಾಠ-ಪೀಠೋಪಕರಣಗಳನ್ನು, ಬೋಧಕ ಬೋಧಕೇತರ ಸಿಬ್ಬಂದಿಯನ್ನು ನೀಡಲಾಗಿದೆ. ಶಾಲೆಯ ಪರಿಸರ ಬಹಳ ಉತ್ತಮವಾಗಿರಲು ಶಾಲೆಯ ಮುಂಭಾಗದಲ್ಲಿ ಶಾಲಾವನ ನಿರ್ಮಿಸಲಾಗಿದೆ. ಕಂಪ್ಯೂಟರ್ ಕೋಣೆಯನ್ನು ಪಿ. ಮೂರ್ತಿರವರು ಕಟ್ಟಿಸಿಕೊಟ್ಟಿರುತ್ತಾರೆ.ಇದು ಕಂಪ್ಯೂಟರ್ ಕೊಠಡಿಯೋ ಅಥವಾ ಯಾವುದಾದರೂ ವಿಶ್ರಾಂತಿ ಧಾಮವೋ ಎನ್ನುವಷ್ಟು ಸುಸಜ್ಜಿತ, ಆಕರ್ಷಕ ವ್ಯವಸ್ಥೆ ಬೆರಗಾಗುವಂತಿದೆ. ಇಲಾಖೆಯಿಂದ ಹಾಗೂ ದಾನಿಗಳ ನೆರವಿನಿಂದ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ.



ಒತ್ತುವರಿ ಮಾಡಿಕೊಂಡಿದ್ದ ಶಾಲಾ ನಿವೇಶನದ ಆಕ್ರಮಣಕಾರರೊಂದಿಗೆ ಹೋರಾಡಿ ಶಾಲೆಗೆ ಬೆಲೆ ಬಾಳುವ ಆಸ್ತಿ ಮಾಡಿರುತ್ತಾರೆ. ಹಾಗೂ ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಶಾಲಾ ಕೊಠಡಿಗಳಲ್ಲಿ ಹಾಗೂ ಮೈದಾನದಲ್ಲಿ ಆಟೋಪಕರಣಗಳನ್ನು ದಾನಿಗಳಿಂದ ಮಾಡಿಸಲಾಗಿದೆ.

ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಶಾಲೆಯಲ್ಲಿ ಯೋಗಾಭ್ಯಾಸ ಹಾಗೂ ನೀತಿಪಾಠದಂತಹ ಕಾರ್ಯಚಟುವಟಿಕೆಗಳನ್ನು ನೀಡುತ್ತಿರುವುದು ಸಂತಸದ ಸಂಗತಿಯಾಗಿರುತ್ತದೆ. ನಾಗರತ್ನಮ್ಮನವರ ಸೇವಾಮನೋಭಾವ, ಸಂಘಟನೆಗಳನ್ನು ಗುರುತಿಸಿ, ಅನೇಕ ಸಂಘಸಂಸ್ಥೆಗಳು ಗೌರವಿಸಿರುವುದು ಹೆಮ್ಮೆಯ ಸಂಗತಿ

### ದಾನಿಗಳಿವರು...



ಶ್ರೀ ಟಿ.ಡಿ.ರಾಮಕೃಷ್ಣ



ಶ್ರೀ ಪಿ.ಮೂರ್ತಿ



ಶ್ರೀಮತಿ ಎನ್.ನಾಗರತ್ನಮ್ಮ
ಮುಖ್ಯಶಿಕ್ಷಕಿ

- ಕ್ಷೇತ್ರ ಸಂಪನ್ಮೂಲ ವ್ಯಕ್ತಿ
ಬೆಂಗಳೂರು ಪೂರ್ವ ತಾಲ್ಲೂಕು



# ಮನಸ್ಸಿದ್ದರೆ ಮಾರ್ಗ ಹಲವಾರು



ಮಿಕ್ಕೆರೆ ಗ್ರಾಮ ಹುಟ್ಟೂರಾಗಿದ್ದು ಬೇರೆ ಬೇರೆ ಕಡೆ ನೌಕರಿಯಲ್ಲಿರುವ ದಾನಿಗಳನ್ನು ಹಿಡಿದು ಅವರ ಮನವೊಲಿಸಿ ಇಂದು ಶಾಲಾ ಮಕ್ಕಳು ಕಂಪ್ಯೂಟರ್ ಶಿಕ್ಷಣದ ಜೊತೆಗೆ ಎಜುಸ್ಯಾಟ್ ಶಿಕ್ಷಣ, ಹೊಲಿಗೆ ತರಬೇತಿಯನ್ನು ಪಡೆಯುವಂತಾಗಿದ್ದಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಕಿರುಗಾವಲು ಕ್ಲಸ್ಟರ್ ವ್ಯಾಪ್ತಿಯಲ್ಲಿರುವ **ಸ.ಹಿ.ಪ್ರಾ.ಶಾಲೆ ಮಿಕ್ಕೆರೆ ಶಾಲೆಯು** ಇಂದು ಜಿಲ್ಲೆಗೆ ಒಂದು ಮಾದರಿಯಾಗಿದೆ. ಜೂನ್ 2006ರಲ್ಲಿ ಪ್ರಭಾರಿ ಮುಖ್ಯ ಶಿಕ್ಷಕರಾಗಿ ಛಾರ್ಜ್ ವಹಿಸಿಕೊಂಡ ಭಾಸ್ಕರ್ ತಮ್ಮ ಶಾಲೆಯನ್ನು ಮಾದರಿ ಶಾಲೆ ಮಾಡುವ ಕನಸು ಹೊತ್ತು, ತನ್ನ ಸಹೋದ್ಯೋಗಿಗಳಾದ ಹೆಚ್. ಎಂ.ಸತೀಶ್, ವೆಂಕಟೇಶ್, ಶಿವು, ಎಂ.ಡಿ.ವೆಂಕಟೇಶ್, ಸುಶೀಲಮ್ಮ ಮತ್ತು ಮಹದೇವಮ್ಮ ಎಲ್ಲರೊಡನೆ ಚರ್ಚಿಸಿ ಎಸ್.ಡಿ.ಎಂ.ಸಿ.ಯ ನೇತೃತ್ವ ದಲ್ಲಿ ಕೇವಲ 8 ತಿಂಗಳಲ್ಲಿ 2 ಲಕ್ಷ ರೂ.ಗಳನ್ನು ನಗದು ಮತ್ತು ವಸ್ತುರೂಪದಲ್ಲಿ ಸಂಗ್ರಹಿಸಿ ಶಾಲೆಯಲ್ಲಿ ಆಕರ್ಷಕ ವಾತಾವರಣವನ್ನು ಸೃಷ್ಟಿಸಿರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ದಾನ ಕೊಡುವವರ ಸಂಖ್ಯೆ ಕಡಿಮೆ ಅನ್ನುವ ನಂಬಿಕೆ ಹಲವಾರು ಶಿಕ್ಷಕರಲ್ಲಿದೆ. ಆದರೆ ಶಾಲೆಯು ಇದಕ್ಕೆ ಅಪವಾದವಾಗಿದೆ. ಮಿಕ್ಕೆರೆ ಗ್ರಾಮ ಹುಟ್ಟೂರಾಗಿದ್ದು ಬೇರೆ ಬೇರೆ ಕಡೆ ನೌಕರಿಯಲ್ಲಿರುವ ದಾನಿಗಳನ್ನು ಹಿಡಿದು ಅವರ ಮನವೊಲಿಸಿ ಇಂದು ಶಾಲಾ ಮಕ್ಕಳು ಕಂಪ್ಯೂಟರ್ ಶಿಕ್ಷಣದ ಜೊತೆಗೆ ಎಜುಸ್ಯಾಟ್ ಶಿಕ್ಷಣ, ಹೊಲಿಗೆ ತರಬೇತಿಯನ್ನೂ ಪಡೆಯುವಂತಾಗಿದ್ದಾರೆ.

ಮಕ್ಕಳು ಮಾತ್ರವಲ್ಲದೆ ಶಿಕ್ಷಕರೂ ಸಮವಸ್ತ್ರ ಧರಿಸಿ ಶಾಲೆಗೆ ಬರುತ್ತಿದ್ದಾರೆ. ಡಿಸೆಂಬರ್ 2006ರಲ್ಲಿ ಹಿರಿಯ ಶ್ರೇಣಿ ಮುಖ್ಯ ಶಿಕ್ಷಕರಾಗಿ ಆಗಮಿಸಿರುವ ರಾಜಶೇಖರ್ ಎಸ್. ಅವರೂ ಸಹ ಸಹಕಾರ ಭಾವನೆಯಿಂದ ಶ್ರಮಿಸುತ್ತಿದ್ದಾರೆ.

ಒಟ್ಟಾರೆ ನಮ್ಮ ಶಿಕ್ಷಕರಲ್ಲಿ ಸಮುದಾಯದಲ್ಲಿರುವ ದಾನಿಗಳನ್ನು ಗುರ್ತಿಸುವ, ಅವರ ಮನವೊಲಿಸಿ ದಾನ ಸಂಗ್ರಹಿಸಿ ಶಾಲೆಯನ್ನು ಅಭಿವೃದ್ಧಿಪಡಿಸುವ ಚಾಕಚಕ್ಯತೆ ಇದ್ದರೆ ಅಸಾಧ್ಯವಾದ ಕೆಲಸವನ್ನು ಸಾಧ್ಯ ಮಾಡಬಹುದು ಎಂಬುದಕ್ಕೆ ಮಿಕ್ಕೆರೆ ಶಾಲೆ ಉದಾಹರಣೆಯಾಗಿದೆ. ಶಿಕ್ಷಕರಲ್ಲಿ ಸಮುದಾಯದ ಜೊತೆ ಹೊಂದಾಣಿಕೆ ಹಾಗೂ ಸಾಮರಸ್ಯ, ತಮ್ಮಲ್ಲಿ ಪರಸ್ಪರ ಹೊಂದಾಣಿಕೆ ಹಾಗೂ ಸರ್ಕಾರದ ಹೊಸ ಯೋಜನೆ ಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರುವ ಹುಮ್ಮಸ್ಸು ಇದ್ದಲ್ಲಿ ಇಂತಹ ಕೆಲಸ ಸಾಧ್ಯ.



– ಸುಶೀಲ
ಸಿ.ಆರ್.ಪಿ. ಕ್ಷೇತ್ರ ಸಂಪನ್ಮೂಲಕೇಂದ್ರ, ಕಿರುಗಾವಲು



**ಪ್ರಧಾನ ಸಂಪಾದಕರು**

**ಎಂ. ಮದನ್‌ಗೋಪಾಲ್,** ಆಯುಕ್ತರು, ಸಾ.ಶಿ.ಇ.

**ಕಾರ್ಯನಿರ್ವಾಹಕ ಸಂಪಾದಕರು**

**ಎಲ್. ಕೆ. ಅತೀಕ್,** ರಾಜ್ಯಯೋಜನಾ ನಿರ್ದೇಶಕರು, ಸ.ಶಿ.ಅ.

**ಸದಸ್ಯರು**

**ಟಿ. ಎಂ. ಕುಮಾರ್,** ನಿರ್ದೇಶಕರು, ಪರೀಕ್ಷಾಮಂಡಳಿ

**ಜಿ. ಚಂದ್ರಶೇಖರ್,** ನಿರ್ದೇಶಕರು ಪ್ರಾಥಮಿಕ ಶಿಕ್ಷಣ

**ಚಿದ್ರೆ ಶಂಕರಯ್ಯಸ್ವಾಮಿ,** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.

**ಮೀರ್ ಒಬೇದುಲ್ಲಾ,** ನಿರ್ದೇಶಕರು, ಈಶಾನ್ಯವಲಯ

**ಉಷಾ,** ನಿರ್ದೇಶಕರು, ವಾಯುವ್ಯವಲಯ

**ಉಷಾದೇವಿ,** ನಿರ್ದೇಶಕರು, ಇತರೆ ಪರೀಕ್ಷೆಗಳು

**ಈಶ್ವರಭಟ್,** ನಿರ್ದೇಶಕರು, ಸ.ಶಿ.ಅ.

**ಸತ್ಯನಾರಾಯಣ ರೆಡ್ಡಿ,** ನಿರ್ದೇಶಕರು, ಪಠ್ಯಪುಸ್ತಕ

**ಎ.ಎ.ಕುಟಿನೋ,** ನಿರ್ದೇಶಕರು, ಅಲ್ಪ ಸಂಖ್ಯಾತ ಭಾಷೆಗಳು

**ಬಿ. ನಂಜುಂಡೇಶ್ವರ,** ಸಹನಿರ್ದೇಶಕರು, ಆಡಳಿತ, ಸಾ.ಶಿ.ಇ.

**ಎನ್. ವಿ. ಸುಬ್ಬಣ್ಣ,** ಮುಖ್ಯಲೆಕ್ಕಾಧಿಕಾರಿ, ಸ.ಶಿ.ಅ.

**ನಿತ್ಯಾನಂದಾರಾಧ್ಯ,** ಸ.ಕಾ.ಅ., ಸ.ಶಿ.ಅ.

**ಅಧ್ಯಕ್ಷರು,** ಕ.ರಾ.ಪ್ರಾ.ಶಾ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಸ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಮಾ.ಶಿ.ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಮು.: ಮ.ಪೂ.ಕಾ.ಪ್ರಾಂ. ಸಂಘ

**ಸಲಹಾ ಸಮಿತಿ**

**ಡಾ|| ಎಸ್. ಶ್ರೀಕಂಠಸ್ವಾಮಿ,** ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

**ಡಾ|| ನಿರಂಜನಾರಾಧ್ಯ,** ಸಂಶೋಧನಾಧಿಕಾರಿಗಳು, ಎನ್.ಎಲ್.ಎಸ್.ಐ.ಯು.,ಬೆಂಗಳೂರು

**ಪ್ರೊ|| ಗಣೇಶ್‌ಭಟ್,** ಎಂ.ಇ.ಎಸ್. ಮಹಾವಿದ್ಯಾಲಯ, ಬೆಂಗಳೂರು.

**ಡಾ|| ಸಿ. ಜಿ. ವೆಂಕಟೇಶ್‌ಮೂರ್ತಿ,** ಆರ್.ಐ.ಇ.,ಮೈಸೂರು

**ಪ್ರೊ|| ಎ.ವಿ. ಗೋವಿಂದರಾವ್,** (ನಿವೃತ್ತ ಪ್ರಾಂಶುಪಾಲರು), ಮೈಸೂರು.

**ಹೆಚ್. ಕುಮಾರಸ್ವಾಮಿ,** ಡಯಟ್, ಮಂಗಳೂರು.

**ಸಹಸಂಪಾದಕರು**

**ಕೆ.ಜಿ. ಕಲಾವತಿ**

**ಕಲಾವಿದ : ಜಿ.ಕೆ. ಶಿವಣ್ಣ**

**ತಾಂತ್ರಿಕ ಬಳಗ : ಸಿ. ಬೋರಯ್ಯ, ಸರಸ್ವತಿ**

**ಆತ್ಮೀಯ ಶಿಕ್ಷಕರೇ,**

ಮುಂಗಾರು ಮಳೆಯೊಂದಿಗೆ ಶಾಲೆಗಳು ಪುನರಾರಂಭಗೊಂಡಿವೆ. ನಮ್ಮ ಶೈಕ್ಷಣಿಕ ಜೀವನದಲ್ಲಿ ಹೊಸ ಆಸೆಯ ಭರವಸೆಗಳು ಚಿಗುರೊಡೆಯಲಿ. ಶಿಕ್ಷಣ ಸಾರ್ವತ್ರೀಕರಣ ಬರೀ ಘೋಷಣೆಯಾಗದೇ, ರಾಜ್ಯದ ಎಲ್ಲ ಮಕ್ಕಳೂ ಶಾಲೆಗೆ ಸೇರುವಂತಾಗಬೇಕು. ಪೋಷಕರ ಬಡತನ, ನಿರುದ್ಯೋಗ, ವಲಸೆ ಇತ್ಯಾದಿ ಸಮಸ್ಯೆಗಳ ನಡುವೆಯೂ ಆ ಮಕ್ಕಳ ಕಲಿಯುವ ಸಾಮರ್ಥ್ಯವನ್ನು ನೋಡಿದರೆ, ನಮಗೆ ಅಪರಾಧಿ ಪ್ರಜ್ಞೆ ಮೂಡುತ್ತದೆ. ಏನು ಮಾಡಿದರೆ ಈ ಮಕ್ಕಳು ಶಾಲೆಗೆ ಬರುತ್ತಾರೆ ? ಶಾಲೆಯಲ್ಲಿ ಉಳಿಯುತ್ತಾರೆ ? ಎಂಬುದು ಈಗ ಪ್ರಶ್ನಾರ್ಥಕವಾಗಿ ಉಳಿದಿಲ್ಲ. ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಶುಲ್ಕ ವಿನಾಯ್ತಿ, ಟೆಂಟ್ ಶಾಲೆ, ವಸತಿ ಶಾಲೆ, ಹೆಣ್ಣುಮಕ್ಕಳಿಗೆ ವಿಶೇಷ ಸೌಲಭ್ಯಗಳು, ಸೈಕಲ್ ಕೊಡುಗೆ–ಈ ಎಲ್ಲ ಸೌಲಭ್ಯಗಳು ಅನಕ್ಷರತೆಯನ್ನು ಬುಡಸಹಿತ ಕಿತ್ತೊಗೆಯುವ ಸಲುವಾಗಿ. ಶಾಲೆಗೆ ಸೇರಿದರೆ ಸಾಲದು, ಅಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದಿಂದ ವಿಮುಖರಾಗಿದ್ದೇ ಆದರೆ ಅದು ಅಪರಾಧವೂ ಹೌದು. ಜನಸಂಖ್ಯೆ ಹಾಗೂ ವಿಸ್ತೀರ್ಣದಲ್ಲಿ ಭಾರತಕ್ಕಿಂತ ಚಿಕ್ಕ ರಾಷ್ಟ್ರಗಳು ಜಾಗತಿಕ ಮಟ್ಟದ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರೇ ಮಾಡಿವೆ. ಜಪಾನ್, ಬ್ರಿಟನ್ ದೇಶಗಳು ಸಾಧಿಸಿದ ಗುಣಮಟ್ಟದ ಶಿಕ್ಷಣ ನಮ್ಮಲ್ಲಿನ್ನೂ ಬರಬೇಕಾಗಿದೆ ಎಂಬ ಅಂಶವನ್ನು ನಮ್ಮ ಶಿಕ್ಷಕರು ಗಮನಿಸಬೇಕು. ನಮ್ಮ ಗುರಿ ಯಾವಾಗಲೂ ಶ್ರೇಷ್ಠತೆಯನ್ನು ಸಾಧಿಸುವತ್ತ ಇರಬೇಕು. ನಲಂದ, ತಕ್ಷಶಿಲಾದಂತಹ ಅತಿ ಶ್ರೇಷ್ಠ ವಿಶ್ವವಿದ್ಯಾಲಯಗಳನ್ನು ಹೊಂದಿದ್ದ ನಮ್ಮ ದೇಶ ಇಂದು ಜಾಗತಿಕ ಮಟ್ಟದಲ್ಲಿ ಕನಿಷ್ಠ ಸ್ಥಾನದಲ್ಲಿದೆ ಎಂಬುದನ್ನು ಅಂಕಿ ಅಂಶಗಳು ಖಚಿತಪಡಿಸಿವೆ.

ಫಾಹಿಯಾನ್, ಹ್ಯೂಯೆನ್‌ತ್ಸಾಂಗ, ಪೈಥಾಗೊರಾಸ್ ಮುಂತಾದವರು ಈ ವಿಶ್ವವಿದ್ಯಾಲಯಗಳಲ್ಲಿ ಕಲಿತವರು ಎಂಬ ಚಾರಿತ್ರಿಕ ಅಂಶ ನಮಗೆ ಸ್ಫೂರ್ತಿಯಾಗಬೇಕು. ಶೈಕ್ಷಣಿಕ ಸಾಧನೆಯ ಅಂಕಿ–ಅಂಶಗಳಲ್ಲಿ ನಮ್ಮದು ಗಣನೀಯ ಸ್ಥಾನಕ್ಕೆ ಏರಬೇಕು. ಅದು ನಮ್ಮ ಗುರಿ. ಪ್ರತಿ ಶಿಕ್ಷಕ/ಶಿಕ್ಷಕಿ ಈ ಬಗ್ಗೆ ಪಣತೊಡಬೇಕು. ಪ್ರಾಥಮಿಕ ಶಿಕ್ಷಣದ ಬೇರು ಸುಭದ್ರವಾಗಿ ಬೇರೂರಿದಲ್ಲಿ ಮಾತ್ರ ನಮ್ಮ ಮುಂದಿನ ಯೋಜನೆಗಳು ಯಶಸ್ವಿಯಾಗುತ್ತದೆ.

ಹಿಂದಿನ ದಿನಗಳಿಗೆ ಹೋಲಿಸಿದರೆ, ಆದಾಯದ ದೃಷ್ಟಿಯಿಂದ ತೃಪ್ತಿಕರ ಜೀವನವನ್ನು ಸರ್ಕಾರ ಒದಗಿಸಿದೆ. ವಿವಿಧ ಸೌಲಭ್ಯಗಳನ್ನೂ ನೀಡಿದೆ. ಆದಾಗ್ಯೂ ಅನೇಕ ಶಿಕ್ಷಕರು ದುರಾಸೆ ಪೀಡಿತರಾಗಿ, ಭ್ರಷ್ಟಾಚಾರಿಗಳಾಗಿರುವುದು ಅಕ್ಷಮ್ಯ. ಮುಗ್ಧ ಮಕ್ಕಳನ್ನು ಅಮಾನವೀಯತೆಯಿಂದ ಶಿಕ್ಷಿಸುವ ಶಿಕ್ಷಕರು ಇಲಾಖೆಗೆ ಶಾಪ. ಈ ಮಕ್ಕಳ ಮೇಲೆ ಬಿಸಿನೀರೆರಚಿ ಹಿಂಸಿಸುವ ಕ್ರೂರಿ ಶಿಕ್ಷಕರು ಇದ್ದಾರೆಂದರೆ, ಅಂತಹ ಶಾಲೆಗೆ ಯಾವ ಪೋಷಕರು ಮಕ್ಕಳನ್ನು ಕಳಿಸುತ್ತಾರೆ ? ಹಲವು ಆದರ್ಶಗಳನ್ನು ಬಿತ್ತಬೇಕಾದವರು ನೀವು. ಪಾಲಿಸಬೇಕಾದವರು ನೀವು. ಸಮಾಜ, ಮಕ್ಕಳ ಹೃದಯದಲ್ಲಿ ಸದಾಕಾಲ ನೆಲಸುವವರು ನೀವು. ಮಕ್ಕಳಂತೂ ತಂದೆತಾಯಿಗಳಿಗಿಂತ ಆದರ್ಶ ಶಿಕ್ಷಕರನ್ನು ಹೆಚ್ಚು ಪ್ರೀತಿಸುತ್ತಾರೆ, ನಿಮ್ಮನ್ನು ಅನುಕರಿಸುತ್ತಾರೆ, ಆರಾಧಿಸುತ್ತಾರೆ, ನಿಮಗೆ ನೋವಾದರೆ ಕಣ್ಣೀರಿಡುತ್ತಾರೆ; ಈಗ ಹೇಳಿ, ನಿಮ್ಮ ಕರ್ತವ್ಯಪಾಲನೆ ಎಷ್ಟು ಔನ್ನತ್ಯದಲ್ಲಿರ ಬೇಕೆಂಬುದನ್ನು.

ಒಂದನೇ ತರಗತಿಯಿಂದಲೇ ಇಂಗ್ಲೀಷ್ ಬೋಧನೆಗಾಗಿ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲಾಗುತ್ತಿದೆ. ಕಲಿಯುವ ಮಕ್ಕಳಿಗೆ, ಬೋಧಿಸುವ ಶಿಕ್ಷಕರಿಗೆ ಪಠ್ಯಪುಸ್ತಕಗಳೇ ಅಂತಿಮವಲ್ಲ. ನಿಮ್ಮ ಬೋಧನೆಯ ಇತಿಮಿತಿಯನ್ನಷ್ಟೇ ಅದು ಸೂಚಿಸುತ್ತದೆ. ಪಠ್ಯಪುಸ್ತಕ ಬರೀ ತೋರುಗಂಬ ಮಾತ್ರ. ನಿಮ್ಮದೇ ಆದ ಚಿಂತನ, ಅಧ್ಯಯನಗಳಿಂದ ಕೂಡಿದ ಬೋಧನೆಯಲ್ಲಿ ನೀವು ತೊಡಗಬೇಕು. ಗ್ರಾಮೀಣ ಮಕ್ಕಳಿಗೆ ಹೆಚ್ಚಿನ ಜೀವನಾವಕಾಶ ಲಭಿಸಲೆಂಬ ನಮ್ಮ ಉದ್ದೇಶ ಯಶಸ್ಸು ಪಡೆಯಬೇಕು.

ಆತ್ಮೀಯ ಶಿಕ್ಷಕರೇ, ಬೋಧನೆಯ ಜಾಡಿನಲ್ಲಿ ನೀವು ಯಶಸ್ಸು ಗಳಿಸಿ, ಮನೆ ಮನೆಯಲ್ಲಿ ಶಿಕ್ಷಣದ ಮೊಗ್ಗು ಅರಳಲಿ.

ಆಯುಕ್ತರು

**ಕಾರ್ಯದರ್ಶಿ / ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, "ಶಿಕ್ಷಕರ ಸದನ", ಕೆಂಪೇಗೌಡ ರಸ್ತೆ, ಬೆಂಗಳೂರು-560 0002**

## ವಿಶೇಷ ಸೂಚನೆ :

### ವಿದ್ಯಾರ್ಥಿ ಮತ್ತು ಶಿಕ್ಷಕರ ಸುರಕ್ಷಾ ವಿಮೆ ಯೋಜನೆ

**2007-08ನೇ ಸಾಲಿಗೆ ವಿದ್ಯಾರ್ಥಿ ಮತ್ತು ಶಿಕ್ಷಕರ ಸುರಕ್ಷಾ ವಿಮೆ ಯೋಜನೆಯ ಒಡಂಬಡಿಕೆಯನ್ನು ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿ., ರವರೊಂದಿಗೆ ಮಾಡಿಕೊಂಡಿರುವುದರಿಂದ ಇನ್ನು ಮುಂದೆ ಅಪಘಾತದ ವಿಮಾ ಪರಿಹಾರ ಪಡೆಯುವ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ವ್ಯಾಪ್ತಿಯ "ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿ.," ರವರಿಗೆ ಮೇಲಧಿಕಾರಿಗಳ ಮೂಲಕ ನೇರವಾಗಿ ಅರ್ಜಿ ಸಲ್ಲಿಸುವುದು.**

ಸಹಿ /-
- (ವಿ.ಎಂ.ಉಮಾಕಾಂತ್)
ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು



## ಗೆದ್ದ ಗಂಗಮ್ಮ, ಸೋತ ಅಂಗ ನ್ಯೂನತೆ

ಕೆ. ಗಂಗಮ್ಮ ಕೂಗೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಈ ಬಾರಿ ಪ್ರಥಮ ದರ್ಜೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದದ್ದು ಮಾತ್ರ ಅಚ್ಚರಿಯ ಸಂಗತಿ.

ಗಂಗಮ್ಮ ಬೆಂಗಳೂರು ದಕ್ಷಿಣ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕೂಗೂರು ಸಮೀಪದ ತಿರುವರಂಗ ಗ್ರಾಮದ ಬಡ ಕುಟುಂಬದಲ್ಲಿ ಹುಟ್ಟಿದವಳು. ಹುಟ್ಟಿದಾಗಿನಿಂದಲೂ ಕಾಲುಗಳಿಲ್ಲ. ಎರಡೂ ಕೈಗಳಲ್ಲಿ ಕೇವಲ ಒಂದೊಂದೇ ಬೆರಳುಗಳಿವೆ. ತಂದೆ ಕೃಷ್ಣಪ್ಪನಿಗೆ ಕೈಕಾಲುಗಳಲ್ಲಿ ಬೆರಳಿಲ್ಲ. ಈ ಸಮಸ್ಯೆಯು ಗಂಗಮ್ಮಳಿಗೆ ಅನುವಂಶೀಯವಾಗಿ ಬಂದದ್ದು. ಇವರ ಪೋಷಕರು ಕೂಲಿ ಮಾಡಿ ಜೀವನವನ್ನು ಸಾಗಿಸುವ ಇವರು ಜಾತಿಯಲ್ಲಿ ಪರಿಶಿಷ್ಟರು.

ಆದರೆ ಈ ಅಂಗವಿಕಲತೆಯು ಬಾಲಕಿಯ ವಿದ್ಯಾಭ್ಯಾಸಕ್ಕೆ ತೊಂದರೆಯಾಗಲಿಲ್ಲ. ಇದನ್ನೇ ಸವಾಲಾಗಿ ಸ್ವೀಕರಿಸಿದ ಬಾಲಕಿ ಎರಡೂ ಕೈಗಳ ಒಂದೊಂದು ಬೆರಳುಗಳ ಮಧ್ಯೆ ಬಳಪ ಹಿಡಿದು ಎಲ್.ಪಿ.ಎಸ್. ತಿರುವರಂಗ ಮುಖ್ಯ ಶಿಕ್ಷಕರಾದ ಗಂಗರಾಜು ಇವರ ನೆರವು ಪಡೆದು ಅಕ್ಷರಾಭ್ಯಾಸ ಮಾಡಿದಳು. ನಂತರ ಎಚ್.ಪಿ.ಎಸ್. ಮುಗಳೂರು ಇಲ್ಲಿನ ಮು.ಶಿ. ರಮೇಶ್ ಇವರ ನೆರವಿನಿಂದ ಶಿಕ್ಷಣವನ್ನು ಮುಂದುವರೆಸಿದಳು.

ತನ್ನ ಸ್ವಂತ ಊರಿನಿಂದ ಸುಮಾರು ಐದು ಕಿ.ಮೀ. ದೂರವಿದ್ದರೂ ಸಹ ಸರ್ಕಾರಿ ಪ್ರೌಢಶಾಲೆ ಕೂಗೂರಿನಲ್ಲಿ ಪ್ರೌಢಶಿಕ್ಷಣವನ್ನು ಮುಂದುವರೆಸಿ ತನ್ನ ಸಹಪಾಠಿಗಳ ಸಹಾಯದಿಂದ, ಸೇಂಟ್ ಜಾನ್ಸ್ ಆಸ್ಪತ್ರೆ ಮುಗಳೂರು ಇವರ ಸಹಕಾರದೊಂದಿಗೆ ಒದಗಿಸಿದ ತಳ್ಳುವ ಗಾಲಿಕುರ್ಚಿಯಲ್ಲಿ ಬರುವುದನ್ನು ರೂಢಿಸಿಕೊಂಡಳು. ಬಿಸಿಲು-ಮಳೆಯನ್ನದೆ ಕಠಿಣವೆನಿಸಿದರೂ ಸಹ ಶಾಲೆಗೆ ಗೈರು ಹಾಜರಾಗದೆ ಬರುತ್ತಿದ್ದಳು. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಸವಾಲಾಗಿ ಸ್ವೀಕರಿಸಿದ, ಗಂಗಮ್ಮ, ಶಾಲೆಯ ಮುಖ್ಯ ಶಿಕ್ಷಕರು,ಸಹ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಕೆ. ಎಂ. ರಾಜೇಂದ್ರ ಅವರ ಸಹಕಾರದಿಂದ ಕಠಿಣ ಅಭ್ಯಾಸ ಮಾಡಿ ಮಾರ್ಚ್ 2007ರಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿ ಎಲ್ಲರ ಮನಸ್ಸನ್ನು ಗೆದ್ದಿದ್ದಾಳೆ.

ಈ ಬಾಲಕಿಗೆ ಉನ್ನತ ವ್ಯಾಸಂಗ ಮಾಡಿ ಐ.ಎ.ಎಸ್., ಅಧಿಕಾರಿಯಾಗಬೇಕೆಂಬ ಹಂಬಲ. ಈ ಮಹದಾಸೆಗೆ ಹೃದಯ ವಂತರು ಹಾಗೂ ಸರ್ಕಾರವು ಸ್ಪಂದಿಸಿ ಆಕೆಯ ಮುಂದಿನ ಶಿಕ್ಷಣಕ್ಕೆ ನೆರವು ನೀಡಬೇಕೆಂಬುದು ಕುಟುಂಬದ ಆಶಯವಾಗಿರುತ್ತದೆ.

**- ಕೆ.ವಿ. ಶ್ರೀನಿವಾಸಮೂರ್ತಿ ಮು.ಶಿ.**
ಸ.ಪ್ರೌಢಶಾಲೆ, ಆನೇಕಲ್




# ಯೋಗಾಸನಗಳು

ಸಿ. **ರಾಮಸ್ವಾಮಿ,** ಎಂ.ಎ.ಬಿ.ಪಿ.ಎಡ್, ಯೋಗನಿರ್ದೇಶಕರು
ಶ್ರೀ ವಾಣಿಬಾಲಕಿಯರ ಪ್ರೌಢಶಾಲೆ, ರಾಜಾಜಿನಗರ, ಬೆಂಗಳೂರು-10
ಮೊ : 9448245699

**ಯೋಗವಿಜ್ಞಾನ**

*** ವೃಕ್ಷಾಸನ**



**ಸ್ಥಿತಿ** : ಪಾದಗಳೆರಡನ್ನೂ ಜೋಡಿಸಿ ತೋಳುಗಳನ್ನು ನೇರಗೊಳಿಸಿ ಹೊಟ್ಟೆಯನ್ನು ಒಳಗೆ ಸೆಳೆದು ಎದೆಯನ್ನು ಉಬ್ಬಿಸಿ ಕುತ್ತಿಗೆಯನ್ನು ನೇರಗೊಳಿಸಿ ದೃಷ್ಟಿ ಮುಂದೆ ಹರಿಸುತ್ತ ನಿಲ್ಲಬೇಕು. (ಸೂಚನೆ. ಎಲ್ಲಾ ಎಣಿಕೆಯ ಪ್ರಾರಂಭದಲ್ಲಿ ಉಚ್ಛ್ವಾಸ ನಂತರ ನಿಶ್ವಾಸ ಮಾಡಬೇಕು)

1) ಎಡಗಾಲ ಮಂಡಿಯನ್ನು ಮಡಿಸಿ ಹಿಮ್ಮಡಿ ಮೇಲ್ಭಾಗಕ್ಕೂ ತುದಿಬೆರಳು ಕೆಳಭಾಗಕ್ಕೂ ಬರುವಂತೆ ಎಡ ಪಾದವನ್ನು ಬಲಒಳತೊಡೆಗೆ ಒತ್ತಿ ಇಡಬೇಕು.

2) ಎರಡು ತೋಳುಗಳನ್ನು ತೆರೆದು ಭೂಮಿಗೆ ಸಮಾನಾಂತರ ವಿರಿಸಬೇಕು.

3) ಎರಡು ತೋಳುಗಳನ್ನು ಇನ್ನೂ ಮೇಲೆತ್ತಿ **'V'** ಆಕಾರದಲ್ಲಿ ನಿಲ್ಲಿಸಬೇಕು.

4) ಎರಡೂ ಹಸ್ತಗಳನ್ನು ಪರಸ್ಪರ ಜೋಡಿಸಿ ಮೊಳಕೈ ನೇರಗೊಳಿಸಿ ಭುಜಗಳನ್ನು ಮೇಲಕ್ಕೆ ತಳ್ಳಿಹಿಡಿಯಬೇಕು. ಕೆಲ ಕ್ಷಣಗಳು ನೆಲೆಸಿದ್ದು ನಂತರ ಕ್ರಮವಾಗಿ ಸ್ಥಿತಿಗೆ ಬರಬೇಕು.



ಪರಿಣಾಮ : ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸಿ ತೊಡೆ ಭುಜತೋಳುಗಳಿಗೆ ಬಲವನ್ನು ನೀಡುತ್ತದೆ.

*** ಅಂಗುಷ್ಠಾಸನ :**

ಅಂಗುಷ್ಠವೆಂದರೆ ಕಾಲಹೆಬ್ಬೆರಳು

1) ಎರಡು ತೋಳುಗಳನ್ನು ಪಕ್ಕದಿಂದ ಮೇಲೆತ್ತಿ ಭುಜದ ನೇರದಲ್ಲಿ ನಿಲ್ಲಿಸಬೇಕು.

2) ಎರಡು ತೋಳುಗಳನ್ನು ಇನ್ನೂ ಮೇಲೆತ್ತಿ ತಲೆಗೆ ನೇರವಾಗಿ ಹಸ್ತಗಳನ್ನು ಸೇರಿಸಬೇಕು.

3) ಮಂಡಿಯನ್ನು ನಿಧಾನವಾಗಿ ಮಡಿಸುತ್ತ ಕುರ್ಚಿ ಆಕಾರದಲ್ಲಿ ಕೂರಬೇಕು.

4) ಹಿಮ್ಮಡಿಯನ್ನು ಮೇಲೆತ್ತಿ ತುದಿಗಾಲ ಮೇಲೆ ಪೂರ್ತಿ ಕೂರಬೇಕು. ಕೆಲಕಾಲ ನೆಲೆಸಿದ್ದು, ನಿಧಾನವಾಗಿ ಹಿಂತಿರುಗಿ ಸ್ಥಿತಿಗೆ ಬರಬೇಕು.

ಪರಿಣಾಮ : ಪಾದ, ಮೀನಖಂಡ, ಮಂಡಿ, ತೊಡೆ ಮತ್ತು ತೋಳುಗಳನ್ನು ಪಳಗಿಸಿ ನೋವಿನಿಂದ ಪರಿಹಾರ ನೀಡುತ್ತದೆ. ಮನಸ್ಸಿನ ಸಮತೋಲವನ್ನು ಕಾಪಾಡುತ್ತದೆ.

*** ವೀರಭದ್ರಾಸನ :**



1) ಮೇಲಕ್ಕೆ ಸ್ವಲ್ಪ ಜಿಗಿದು ಎರಡೂ ಕಾಲುಗಳನ್ನು ಎರಡರಿಂದ ಮೂರು ಅಡಿಯಷ್ಟು ತೆರೆದಿಡಬೇಕು ತೋಳುಗಳನ್ನು ತೆರೆದು ಭುಜದ ನೇರದಲ್ಲಿರಿಸಬೇಕು.

2) ಸೊಂಟವನ್ನು ಮತ್ತು ಎಡಪಾದವನ್ನು ಎಡಪಕ್ಕಕ್ಕೆ ತಿರುಗಿಸಿ ಎಡಗಾಲ ಮಂಡಿಯನ್ನು ಸ್ವಲ್ಪ ಮಡಿಸಬೇಕು.

3) ತೋಳುಗಳನ್ನು ಮೇಲೆತ್ತಿ ತಲೆಯ ನೇರದಲ್ಲಿ ನಮಸ್ತೆ ಮಾಡಬೇಕು.

4) ನಿಧಾನವಾಗಿ ದೇಹದ ಭಾರವನ್ನೆಲ್ಲ ಎಡಗಾಲ ಮೇಲೆ ಬಿಡುತ್ತ ಬಲಗಾಲನ್ನು ಮೇಲೆತ್ತುತ್ತಾ ದೇಹವನ್ನು ಮುಂದೆ ಬಾಗಿಸುತ್ತ ಕೈ ತುದಿಬೆರಳಿನಿಂದ ಬಲಗಾಲ ಅಂಗುಷ್ಠದವರೆಗೆ, ದೇಹವು ಭೂಮಿಗೆ ಸಮಾನಾಂತರವಿರುವಂತೆ ನಿಲ್ಲಿಸಬೇಕು.

ಪರಿಣಾಮ : ಮನಸ್ಸಿಗೆ ದೇಹದ ಮೇಲಿನ ಹಿಡಿತವನ್ನು ಸಾಧಿಸುವ ಛಲ ದೊರೆಯುತ್ತದೆ. ಬೆನ್ನು ಮೂಳೆಯು ಬಲಗೊಂಡು ರಕ್ತ ಸಂಚಾರ ಚೆನ್ನಾಗಿ ನಡೆಯುತ್ತದೆ. ಮುಖದ ಕಾಂತಿಯನ್ನು ಹೆಚ್ಚಿಸುತ್ತದೆ.

**ಯಮ : ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ**

## ಕಳಬೇಡ... ಕೊಲಬೇಡ...

**ಅಸ್ತೇಯ :** ಸ್ತೇಯ ಅಂದರೆ ಕದಿಯುವುದು, ಅಸ್ತೇಯ ಅಂದರೆ ಕಳ್ಳತನ ಮಾಡದಿರುವುದು. ಬೇರೆಯವರ ಯಾವುದೇ ವಸ್ತುಗಳನ್ನು ಅವು ಎಷ್ಟೇ ಅಮೂಲ್ಯವಾದದ್ದಾಗಿರಲಿ ಅಥವಾ ಚಿಕ್ಕದಾಗಿರಲಿ ಮುಟ್ಟಬಾರದು. ಇನ್ನೊಬ್ಬರ ವಸ್ತುಗಳನ್ನು ಮುಟ್ಟದಿರುವುದು ಒಂದು ವ್ರತ. ಇದರಿಂದ ಬದುಕಿನಲ್ಲಿ ಸಭ್ಯತೆ ಹಾಗೂ ಆತ್ಮವಿಶ್ವಾಸ ಮೂಡಿಸುತ್ತದೆ, ಹಾಗೂ ವ್ಯಕ್ತಿಯನ್ನು ಸಂಪನ್ನನನ್ನಾಗಿಸುತ್ತದೆ. ವಿದ್ಯಾರ್ಥಿಗಳು ಬಾಲ್ಯದಿಂದಲೇ ಒಳ್ಳೆ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಕಳ್ಳತನ ಮಾಡುವುದು, ಸುಳ್ಳು ಹೇಳುವುದು, ಕೆಟ್ಟ ನಡತೆ ಇಂತಹ ಅಸಭ್ಯ ವರ್ತನೆಗಳನ್ನು ಮಾಡಬಾರದು. ತನ್ನ ಬದುಕಿಗೆ ಅಗತ್ಯವಾಗಿರುವುದಕ್ಕಿಂತ ಹೆಚ್ಚಾಗಿ ವಸ್ತುಗಳನ್ನು ಸಂಗ್ರಹಿಸದಿರುವುದು ಅಸ್ತೇಯವೇ. ಯೋಗ ಅಸ್ತೇಯವನ್ನು ಪಾಲಿಸುವಂತೆ ತಿಳಿಸುತ್ತದೆ.

## ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಪರಮ ಪವಿತ್ರ ಕಾರ್ಯ

**(ಬಾಗಲಕೋಟೆ ಜಿಲ್ಲೆಗೆ 2006-07ನೇ ಸಾಲಿನ ಪ್ರಾಥಮಿಕ ಶಾಲಾ ನೇಮಕಾತಿಯಲ್ಲಿ ನೇಮಕವಾಗಿರುವ ಗರಿಷ್ಠ ಮೊದಲ 10 ಸ್ಥಾನ ಗಳಿಸಿದ ಶಿಕ್ಷಕರಿಂದ ಸಂಗ್ರಹಿಸಿದ ಅಭಿಪ್ರಾಯಗಳು)**



* ಇದು ಸ್ಪರ್ಧಾತ್ಮಕ ಯುಗ ಭಾವಿ ಸಮಾಜದ ನಾಗರಿಕರ, ವ್ಯಕ್ತಿತ್ವ ರೂಪಿಸಲು ಬೇಕಾದ ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಲು ಒಂದು ಸದೃಢ ವ್ಯವಸ್ಥೆ ಬೇಕಾಗಿತ್ತು. ಆ ಸ್ಥಾನವನ್ನು ಇಂದಿನ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷಾ (ಸಿ.ಇ.ಟಿ) ಪದ್ಧತಿಯು ತುಂಬಿದೆ. ಅತ್ಯಂತ ವ್ಯವಸ್ಥಿತ, ನಿಯಮಬದ್ಧ ಮತ್ತು ಪಾರದರ್ಶಕವಾಗಿ ನಡೆಯುವ ಈ ಪರೀಕ್ಷೆಯು ಅಭ್ಯರ್ಥಿಗಳು ತಮ್ಮ ಪ್ರತಿಭೆಯನ್ನು ತೋರಿಸಿ "ಶಿಕ್ಷಕ" ಸ್ಥಾನದಂತಹ ಜವಾಬ್ದಾರಿಯುತ ಹುದ್ದೆ ಅಲಂಕರಿಸಲು ಸೂಕ್ತ ವೇದಿಕೆಯಾಗಿದೆ.

**– ಸಂಗಮೇಶ ದಾದನಟ್ಟಿ**



* ಸಾಮಾನ್ಯ ಜ್ಞಾನದಿಂದ ಹಿಡಿದು ಎಲ್ಲಾ ವಿಷಯಗಳಲ್ಲಿ ಅಭ್ಯರ್ಥಿ ಗಳಿಗೆ ಇರುವ ಜ್ಞಾನದ ಮಟ್ಟವನ್ನು ಅಳೆಯಲು ಸಿ.ಇ.ಟಿ. ಒಂದು ಅಳತೆಗೋಲನ್ನು ಒದಗಿಸಿದೆ. ಕಲ್ಲಿದ್ದಲಿನ ಗಣಿಯಿಂದ ವಜ್ರಗಳನ್ನು ಮಾತ್ರ ಆಯ್ದುಕೊಳ್ಳುವಂತೆ ಸಾವಿರಾರು ಉದ್ಯೋಗಾಕಾಂಕ್ಷಿಗಳಲ್ಲಿ ಉತ್ತಮ ಶಿಕ್ಷಕರನ್ನು ಮಾತ್ರ ಆಯ್ದುಕೊಳ್ಳುವಲ್ಲಿ ಸಿ.ಇ.ಟಿ.ಯು ತನ್ನ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಇಂತಹ ಕ್ರಮದಲ್ಲಿಯೇ ಶಿಕ್ಷಕರ ನೇಮಕಾತಿ ಮುಂದುವರಿಯಲಿ.

**– ಅಬೀದ ಗದ್ಯಾಳ**



* ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಸಿ.ಇ.ಟಿ. ಅಳವಡಿಸಿರುವುದು ವಸ್ತುನಿಷ್ಠ ಮತ್ತು ಸೂಕ್ತವಾದ ಕ್ರಮವಾಗಿದೆ. ಪಿ.ಯು.ಸಿ. ಮತ್ತು ಡಿ.ಇಡಿ.ಗಳಲ್ಲಿ ಯಾವುದೇ ಮಾರ್ಗದಿಂದ ಹೆಚ್ಚಿನ ಅಂಕಗಳಿಸಿದರೂ ನಿಜವಾದ ಪ್ರತಿಭೆಯ ದರ್ಶನವಾಗಲಾರದು. ಆದರೆ ಸಿ.ಇ.ಟಿ. ಪರೀಕ್ಷಯಲ್ಲಿ ಮಾತ್ರ ಉತ್ತಮ ಸಾಮರ್ಥ್ಯವುಳ್ಳವರು ಮಾತ್ರ ಯಶಸ್ಸನ್ನು ಕಾಣುವರು. ಈ ಉತ್ತಮ ಕ್ರಮದಿಂದ ಪ್ರತಿಭಾವಂತ ಶಿಕ್ಷಕ ವರ್ಗವು ಶಿಕ್ಷಣ ಇಲಾಖೆಗೆ ದೊರೆತು ಶಿಕ್ಷಣ ಇಲಾಖೆಯಲ್ಲಿ ಉತ್ತಮ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

**– ಅನ್ನಪೂರ್ಣ ಎಸ್. ಪಾಟೀಲ**



* ಚಿನ್ನಕ್ಕಿಂತ ಅನ್ನ ಲೇಸು, ಅನ್ನಕ್ಕಿಂತ ಅಕ್ಷರ ಲೇಸು. ಎಂಬಂತೆ ಈ ಕಂಪ್ಯೂಟರ್, ವ್ಯೋಮ, ತಂತ್ರಜ್ಞಾನ ಯುಗದಲ್ಲಿ ಅಕ್ಷರ ಜ್ಞಾನವಿಲ್ಲದೇ ಬದುಕುವುದು ತುಂಬಾ ದುಸ್ತರ ಹಾಗೂ ಕಷ್ಟಕರ. ಉತ್ತಮ ಶಿಕ್ಷಣ ಪಡೆದು ಯಾವುದೇ ಶಿಫಾರಸ್ಸು, ಲಂಚ ಗಳಿಲ್ಲದೇ ಬದುಕಿಗೆ ಒಂದು ಸರಕಾರಿ ಉದ್ಯೋಗ ಪಡೆಯುವುದು ಅಷ್ಟೇ ಕಷ್ಟವು. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ನಡೆಸಲಾಗುವ ಸಿ.ಇ.ಟಿ. ಯ ಪರೀಕ್ಷೆಯ ಮುಖಾಂತರ ಮಾಡಲಾಗುವ ನೇಮಕಾತಿಯು ಉತ್ತಮ ಸಾಮರ್ಥ್ಯ ಇರುವಂತಹ ಅರ್ಹ ಅಭ್ಯರ್ಥಿಗಳು ನಿರಾಯಾಸವಾಗಿ ಸರಕಾರಿ ಕೆಲವನ್ನು ಪಡೆಯಬಹುದಾಗಿದೆ.

**– ಈರಮ್ಮ ಜವಳಿ**



* ಹಗಲು ಕಂಡ ಬಾವಿಯಲ್ಲಿ ರಾತ್ರಿ ಬೀಳುತ್ತಾರೆ ಎನ್ನುವಂತಿರುವ ಎಲ್ಲರೂ ಲಂಚ ವಗೈರೆ ಆಸೆಗಳಿಗೆ ಬಲಿಯಾಗುವಂತಹ ಈ ಕಾಲದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ನಡೆಸಲಾಗುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯು ಅರ್ಹ, ಪ್ರತಿಭಾವಂತ ಅಭ್ಯರ್ಥಿಗಳಿಗೆ ಹೇಳಿ ಮಾಡಿಸಿದಂತಹ ಪರೀಕ್ಷೆಯಾಗಿದೆ. ಈ ವ್ಯವಸ್ಥೆಯಲ್ಲಿ ಯಾವುದೇ ತೊಂದರೆ ಇಲ್ಲದೆ ಸರಕಾರಿ ಕೆಲಸ ಪಡೆದು ಕೌನ್ಸಲಿಂಗ್ ಮುಖಾಂತರ ನಮಗೆ ಬೇಕಾಗಿರುವ ಸ್ಥಳಗಳನ್ನು ಆಯ್ದುಕೊಂಡು ಕೆಲಸವನ್ನು ನೆಮ್ಮದಿಯಿಂದ ಮಾಡಬಹುದಾಗಿದೆ. ಇದೇ ಕ್ರಮವು ಮುಂದುವರೆಯಲಿ.

**– ಜಯಶ್ರೀ ರೂಗಿ**



* ರಾಷ್ಟ್ರದ ಮಕ್ಕಳ ಭವಿಷ್ಯವು ನಾಲ್ಕು ಗೋಡೆಗಳ ಮಧ್ಯ ನಿರ್ಧಾರಿತವಾಗುತ್ತದೆ ಎಂದು ಹೇಳುವ ಕಾಲದಲ್ಲಿ ಮಗುವಿನ ಪ್ರಾರಂಭಿಕ ಶಿಕ್ಷಣವು ಪ್ರಾಥಮಿಕ ಶಿಕ್ಷಣದಿಂದಲೇ ಪ್ರಾರಂಭಗೊಂಡು ಉತ್ತಮ ಹಂತವನ್ನು ತಲುಪಬೇಕಿರುತ್ತದೆ. ಆ ಪ್ರಾರಂಭಿಕ ಹಂತದ ಶಿಕ್ಷಣವನ್ನು ನೀಡುವ ಶಿಕ್ಷಕರು ಉತ್ತಮ ಪ್ರತಿಭೆ, ಅರ್ಹತೆಯನ್ನು ಹೊಂದಿದ್ದರೆ ಮಾತ್ರ ಅದು ಸಾಧ್ಯವು. ಈಗ ಸಿ.ಇ.ಟಿ. ಮೂಲಕ ನೇಮಕಾತಿ ಮಾಡುವ ಕ್ರಮವು ಉತ್ತಮ ಅರ್ಹ ಶಿಕ್ಷಕರನ್ನು ಆಯ್ಕೆ ಮಾಡುವಲ್ಲಿ ಸಫಲವಾಗುತ್ತಿದೆ. ಇದೇ ಕ್ರಮವು ಮುಂದುವರೆಯಲಿ.

**– ಶೈಲಾ ತಿರಕಿ**

ಪುಟ21ಕ್ಕೆ...

**2007–08 ನೇ ಸಾಲಿನ ಚಿನ್ನರ ಚುಕ್ಕಿ / ಚುಕ್ಕಿ ಚಿನ್ನಾ ಅಂತರ ಕ್ರಿಯಾತ್ಮಕ ರೇಡಿಯೋ ಶಿಕ್ಷಣ (ಐ.ಆರ್.ಐ) ಕಾರ್ಯಕ್ರಮ ಸರಣಿಗಳ ಪ್ರಸಾರ ಸೂಚಿ (ಜುಲೈ 2007 ರಿಂದ ಮಾರ್ಚ 2008 ರವರೆಗೆ)**

ತರಗತಿ: 1, 2 ಮತ್ತು 3

| ದಿನಾಂಕ | ದಿನ | | ಕಾರ್ಯಕ್ರಮ | ತರಗತಿ | ವಿಷಯ |
|---|---|---|---|---|---|
| 9/7/2007 | ಸೋಮವಾರ | 1 | ಆಲಿಸು ಅನುಸರಿಸು1 ಮತ್ತು 2 | ಪರಿಚಾ0ಯತ್ಮಕ ಘಟಕ | 10/7/2007 |
| ಮಂಗಳವಾರ | 2 | | **ಇನ್ನಷ್ಟು ಆಲಿಸು, ಇನ್ನಷ್ಟು ಅನುಸರಿಸು** | 1 ಮತ್ತು 2 | ಪರಿಚಯಾತ್ಮಕ ಘಟಕ |
| 11/7/2007 | ಬುಧವಾರ | 3 | ನಾವು ಶುಚಿಯಾಗಿರೋಣ | 1 ಮತ್ತು 2 | ಪ.ಅಧ್ಯಯನ |
| 12/7/2007 | ಗುರುವಾರ | 4 | **ಉತ್ತಮ ಆರೋಗ್ಯದ ಕೆಲವು ನಿಯಮಗಳು** | | 1 ಮತ್ತು 2 ಪ.ಅಧ್ಯ0ಯನ |
| 13/7/2007 | ಶುಕ್ರವಾರ | 5 | ಚುಕ್ಕಿ ಚಿನ್ನ ಹೇಗಿದೆ? | 3 | ಪರಿಚಯಾತ್ಮಕ ಘಟಕ |
| 16/7/2007 | ಸೋಮವಾರ | 6 | ಚುಕ್ಕಿ ಚಿನ್ನ ಹೀಗಿದೆ? | 3 | ಪರಿಚಯಾತ್ಮಕ ಘಟಕ |
| 17/07/2007 | ಮಂಗಳವಾರ | 7 | ಸ್ಪಷ್ಟ ಮಾತು 3 | ಕನ್ನಡ | |
| 18/07/2007 | ಬುಧವಾರ | 8 | ಇನ್ನಷ್ಟು ಸ್ಪಷ್ಟ ಮಾತು | 3 | ಕನ್ನಡ |
| 19/07/2007 | ಗುರುವಾರ | 9 | Lesson 1 | 1 ಮತ್ತು 2 | ಇಂಗ್ಲಿಷ್ |
| 20/07/2007 | ಶುಕ್ರವಾರ | 10 | Lesson 2 | 1 ಮತ್ತು 2 | ಇಂಗ್ಲಿಷ್ |
| 21/07/2007 | ಶನಿವಾರ | | Lesson 1 | ಪುನರಾವರ್ತನೆ | |
| 23/07/2007 | ಸೋಮವಾರ | 11 | ಕನ್ನಡ ಕೇಳೋಣ ಭಾಗ 1 | 1 ಮತ್ತು 2 | ಕನ್ನಡ |
| 24/07/2007 | ಮಂಗಳವಾರ | 12 | ಕನ್ನಡ ಕೇಳೋಣ ಭಾಗ 2 | 1 ಮತ್ತು 2 | ಕನ್ನಡ |
| 25/07/2007 | ಬುಧವಾರ | 13 | ಸ್ಥಾನ ಬೆಲೆ ಭಾಗ 13 | ಗಣಿತ | |
| 26/07/2007 | ಗುರುವಾರ | 14 | ಸ್ಥಾನ ಬೆಲೆ ಭಾಗ 2 | 3 | ಗಣಿತ |
| 27/07/2007 | ಶುಕ್ರವಾರ | 15 | Lesson 3 | 1 ಮತ್ತು 2 | ಇಂಗ್ಲಿಷ್ |
| 28/07/2007 | ಶನಿವಾರ | | Lesson 2 | ಪುನರಾವರ್ತನೆ | |
| 30/07/2007 | ಸೋಮವಾರ | 16 | ಏರಿಕೆ ಮತ್ತು ಇಳಿಕೆ ಕ್ರಮ | 1 ಮತ್ತು 2 | ಗಣಿತ |
| 31/07/2007 | ಮಂಗಳವಾರ | 17 | ಸಂಖ್ಯೆಗಳನ್ನು ಗುರುತಿಸುವುದು | 1 ಮತ್ತು 2 | ಗಣಿತ |
| 1/8/2007 | ಬುಧವಾರ | 18 | ನಮ್ಮ ಸುತ್ತಮುತ್ತ ಏನಿದೆ? | 3 | ಪ.ಅಧ್ಯಯನ |
| 2/8/2007 | ಗುರುವಾರ | 19 | ಸಜೀವಿಗಳು ಮತ್ತು ನಿರ್ಜೀವಿಗಳು | 3 | ಪ.ಅಧ್ಯಯನ |
| 3/8/2007 | ಶುಕ್ರವಾರ | 20 | Lesson 4 | 1 ಮತ್ತು 2 | ಇಂಗ್ಲಿಷ್ |
| 4/8/2007 | ಶನಿವಾರ | | Lesson 3 | 1 ಮತ್ತು 2 | ಪುನರಾವರ್ತನೆ |
| 6/8/2007 | ಸೋಮವಾರ | 21 | ಸೊನ್ನೆಯ ಕಲ್ಪನೆ | 1 ಮತ್ತು 2 | ಗಣಿತ |
| 7/8/2007 | ಮಂಗಳವಾರ | 22 | ಸಂಖ್ಯೆಗಳನ್ನು ಬರೆಯುವುದು | 1 ಮತ್ತು 2 | ಗಣಿತ |
| 8/8/2007 | ಬುಧವಾರ | 23 | ಏರಿಕೆ ಮತ್ತು ಇಳಿಕೆ ಕ್ರಮ | 3 | ಗಣಿತ |
| 9/8/2007 | ಗುರುವಾರ | 24 | ದೊಡ್ಡ ಸಂಖ್ಯೆಗಳನ್ನು ಬರೆಯುವುದು | 3 | ಗಣಿತ |
| 10/8/2007 | ಶುಕ್ರವಾರ | 25 | Lesson 5 | 1 ಮತ್ತು 2 | ಇಂಗ್ಲಿಷ್ |
| 11/8/2007 | ಶನಿವಾರ | | Lesson 4 | 1 ಮತ್ತು 2 | ಪುನರಾವರ್ತನೆ |
| 13/08/2007 | ಸೋಮವಾರ | 26 | ಗುಣಿತಾಕ್ಷರ ಪರಿಚಯ ಭಾಗ 1 | 1 ಮತ್ತು 2 | ಕನ್ನಡ |
| 14/08/2007 | ಮಂಗಳವಾರ | 27 | ಗುಣಿತಾಕ್ಷರ ಪರಿಚಯ ಭಾಗ 2 | 1 ಮತ್ತು 2 | ಕನ್ನಡ |
| 16/08/2007 | ಗುರುವಾರ | 28 | ಎರಡಂಕಿ ಸಂಖ್ಯೆಗಳ ದಶಕ ಸಹಿತ ಸಂಕಲನ | | 3 ಗಣಿತ |
| 17/08/2007 | ಶುಕ್ರವಾರ | 29 | ಮೂರಂಕಿಯ ಸಂಖ್ಯೆಗಳ ದಶಕ ಸಹಿತ ಸಂಕಲನ | | 3 ಗಣಿತ |
| 18/08/2007 | ಶನಿವಾರ | | Lesson 5 | 1 ಮತ್ತು 2 | ಪುನರಾವರ್ತನೆ |
| 20/08/2007 | ಸೋಮವಾರ | 30 | ಕತೆ ಕತೆ ಕಾರಣ ಭಾಗ 1 | 1 ಮತ್ತು 2 | ಕನ್ನಡ |
| 21/08/2007 | ಮಂಗಳವಾರ | 31 | ಕತೆ ಕತೆ ಕಾರಣ ಭಾಗ 2 | 1 ಮತ್ತು 2 | ಕನ್ನಡ |
| 22/08/2007 | ಬುಧವಾರ | 32 | ಎರಡಂಕಿ ಸಂಖ್ಯೆಗಳ ದಶಕ ಸಹಿತ ವ್ಯವಕಲನ | | 3 ಗಣಿತ |
| 23/08/2007 | ಗುರುವಾರ | 33 | ಮೂರಂಕಿಯ ಸಂಖ್ಯೆಗಳ ದಶಕ ಸಹಿತ ವ್ಯವಕಲನ | | 3 ಗಣಿತ |
| 30/08/2007 | ಗುರುವಾರ | 34 | Lesson 6 | 1ಮತ್ತು 2 | ಇಂಗ್ಲಿಷ್ |

| | | | | | |
|---|---|---|---|---|---|
| 31/08/2007 | ಶುಕ್ರವಾರ | 35 | Lesson 7 | 1 ಮತ್ತು 2 | ಇಂಗ್ಲಿಷ್ |
| 1/9/2007 | ಶನಿವಾರ | | Lesson 6 | 1 ಮತ್ತು 2 | ಪುನರಾವರ್ತನೆ |
| 3/9/2007 | ಸೋಮವಾರ | 36 | ಆಟದ ಪಾಠ 3 | ಕನ್ನಡ | |
| 5/9/2007 | ಬುಧವಾರ | 37 | ಆಟದ ಬಯಲು 3 | ಕನ್ನಡ | |
| 6/9/2007 | ಗುರುವಾರ | 38 | ಸಸ್ಯಗಳಿಗೆ ಏನು ಬೇಕು? | 3 | ಪ.ಅಧ್ಯಯನ |
| 7/9/2007 | ಶುಕ್ರವಾರ | 39 | ಸಸ್ಯಗಳು ಮತ್ತು ಕಾಲಗಳು | 3 | ಪ.ಅಧ್ಯಯನ |
| 8/9/2007 | ಶನಿವಾರ | | Lesson 7 | 1 ಮತ್ತು 2 | ಪುನರಾವರ್ತನೆ |
| 10/9/2007 | ಸೋಮವಾರ | 40 | ನಮಗೆ ಆಹಾರ ಏಕೆ ಬೇಕು? | 3 | ಪ.ಅಧ್ಯಯನ |
| 11/9/2007 | ಮಂಗಳವಾರ | 41 | ಆಹಾರ ತ0ಯಾರಿಕೆ0ಯ ಸುರಕ್ಷಿತ ವಿಧಾನಗಳು | 3 | ಪ.ಅಧ್ಯಯನ |
| 3/10/2007 | ಬುಧವಾರ | 42 | ಗುಂಪುಗಳ ರಚನೆ | 1 ಮತ್ತು 2 | ಗಣಿತ |
| 4/10/2007 | ಗುರುವಾರ | 43 | ಗುಂಪುಗಳ ಹೋಲಿಕೆ | 1 ಮತ್ತು 2 | ಗಣಿತ |
| 5/10/2007 | ಶುಕ್ರವಾರ | 44 | Lesson 8 | 1 ಮತ್ತು 2 | ಇಂಗ್ಲಿಷ್ |
| 6/10/2007 | ಶನಿವಾರ | | Lesson 8 | 1 ಮತ್ತು 2 | ಪುನರಾವರ್ತನೆ |
| 8/10/2007 | ಸೋಮವಾರ | 45 | ವಸ್ತುಗಳಲ್ಲಿ ವಿನ್ಯಾಸ ರಚನೆ | 1 ಮತ್ತು 2 | ಗಣಿತ |
| 9/10/2007 | ಮಂಗಳವಾರ | 46 | ಸಂಖ್ಯೆಗಳಲ್ಲಿ ವಿನ್ಯಾಸ ರಚನೆ | 1 ಮತ್ತು 2 | ಗಣಿತ |
| 11/10/2007 | ಗುರುವಾರ | 47 | Lesson 9 | 1 ಮತ್ತು 2 | ಇಂಗ್ಲಿಷ್ |
| 15/10/2007 | ಸೋಮವಾರ | 48 | ಹಣದ ಸಂಕಲನ ಮತ್ತು ವ್ಯವಕಲನ | 3 | ಗಣಿತ |
| 16/10/2007 | ಮಂಗಳವಾರ | 49 | ಮಾರುಕಟ್ಟೆಯಲ್ಲಿ ಹಣ | 3 | ಗಣಿತ |
| 17/10/2007 | ಬುಧವಾರ | 50 | Lesson 10 | 1 ಮತ್ತು 2 | ಇಂಗ್ಲಿಷ್ |
| 19/10/2007 | ಶುಕ್ರವಾರ | 51 | Lesson 11 | 1 ಮತ್ತು 2 | ಇಂಗ್ಲಿಷ್ |
| 22/10/2007 | ಸೋಮವಾರ | 52 | ಕಾಲಗಳು ಮತ್ತು ನಾವು ಭಾಗ 1 | 1 ಮತ್ತು 2 | ಪ.ಅಧ್ಯಯನ |
| 23/10/2007 | ಮಂಗಳವಾರ | 53 | ಕಾಲಗಳು ಮತ್ತು ನಾವು ಭಾಗ 2 | 1 ಮತ್ತು 2 | ಪ.ಅಧ್ಯಯನ |
| 24/10/2007 | ಬುಧವಾರ | 54 | ಏನಾಯ್ತಕ್ಕ ಏನಾಯ್ತು? | 3 | ಕನ್ನಡ |
| 25/10/2007 | ಗುರುವಾರ | 55 | ಹೀಗಾಯ್ತಕ್ಕ ಹೀಗಾಯ್ತು! | 3 | ಕನ್ನಡ |
| 26/10/2007 | ಶುಕ್ರವಾರ | 56 | Lesson 12 | 1 ಮತ್ತು 2 | ಇಂಗ್ಲಿಷ್ |
| 27/10/2007 | ಶನಿವಾರ | | Lesson 11 | 1 ಮತ್ತು 2 | ಪುನರಾವರ್ತನೆ |
| 29/10/2007 | ಸೋಮವಾರ | 57 | ಸ್ಥಾನ ಬೆಲೆ ಭಾಗ 1 | 1 ಮತ್ತು 2 | ಗಣಿತ |
| 30/10/2007 | ಮಂಗಳವಾರ | 58 | ಸ್ಥಾನ ಬೆಲೆ ಭಾಗ 2 | 1 ಮತ್ತು 2 | ಗಣಿತ |
| 31/10/2007 | ಬುಧವಾರ | 59 | Lesson 13 | 1 ಮತ್ತು 2 | ಇಂಗ್ಲಿಷ್ |
| 5/11/2007 | ಸೋಮವಾರ | 60 | ನಕಾಶೆಗಳ ಬಗ್ಗೆ ಕಲಿ0ಯೋಣ | 3 | ಪ.ಅಧ್ಯಯನ |
| 6/11/2007 | ಮಂಗಳವಾರ | 61 | ನಕಾಶೆಗಳನ್ನು ಬಿಡಿಸೋಣ | 3 | ಪ.ಅಧ್ಯಯನ |
| 7/11/2007 | ಬುಧವಾರ | 62 | Lesson 14 | 1 ಮತ್ತು 2 | ಇಂಗ್ಲಿಷ್ |
| 12/11/2007 | ಸೋಮವಾರ | 63 | ವಸ್ತುಗಳನ್ನು ಬಳಸಿ ಸಂಕಲನ | 1 ಮತ್ತು 2 | ಗಣಿತ |
| 13/11/2007 | ಮಂಗಳವಾರ | 64 | ದಶಕರಹಿತ ಸಂಕಲನ | 1 ಮತ್ತು 2 | ಗಣಿತ |
| 14/11/2007 | ಬುಧವಾರ | 65 | ಅಬ್ಬಾ ಇದು ಭಾರ! 3 | ಗಣಿತ | |
| 15/11/2007 | ಗುರುವಾರ | 66 | ಕಿಲೋ ಗ್ರಾಂ ಅಂದರೆ ಏನು? | 3 | ಗಣಿತ |
| 16/11/2007 | ಶುಕ್ರವಾರ | 67 | Lesson 15 | 1 ಮತ್ತು 2 | ಇಂಗ್ಲಿಷ್ |
| 17/11/2007 | ಶನಿವಾರ | | Lesson 14 | 1 ಮತ್ತು 2 | ಪುನರಾವರ್ತನೆ |
| 19/11/2007 | ಸೋಮವಾರ | 68 | ತೂಕ ಮಾಡಿ ನೋಡೋಣ | 3 | ಗಣಿತ |
| 20/11/2007 | ಮಂಗಳವಾರ | 69 | ಅಳೆದು ಸುರಿದು ನೋಡೋಣ | 3 | ಗಣಿತ |
| 21/11/2007 | ಬುಧವಾರ | 70 | ಕತೆ ಕೇಳೋಣ ಭಾಗ–1 | 1 ಮತ್ತು 2 | ಕನ್ನಡ |
| 22/11/2007 | ಗುರವಾರ | 71 | ಕತೆ ಕೇಳೋಣ ಭಾಗ–2 | 1 ಮತ್ತು 2 | ಕನ್ನಡ |
| 23/11/2007 | ಶುಕ್ರವಾರ | 72 | Lesson 16 | 1 ಮತ್ತು 2 | ಇಂಗ್ಲಿಷ್ |
| 28/11/2007 | ಬುಧವಾರ | 73 | ವಸ್ತುಗಳನ್ನು ಬಳಸಿ ವ್ಯವಕಲನ | 1 ಮತ್ತು 2 | ಗಣಿತ |
| 29/11/2007 | ಗುರವಾರ | 74 | ದಶಕರಹಿತ ವ್ಯವಕಲನ | 1 ಮತ್ತು 2 | ಗಣಿತ |

| | | | | | |
|---|---|---|---|---|---|
| 30/11/2007 | ಶುಕ್ರವಾರ | 75 | Lesson 17 | 1 ಮತ್ತು 2 | ಇಂಗ್ಲಿಷ್ |
| 1/12/2007 | ಶನಿವಾರ | | Lesson 16 | 1 ಮತ್ತು 2 | ಪುನರಾವರ್ತನೆ |
| 3/12/2007 | ಸೋಮವಾರ | 76 | ದಯವಿಟ್ಟು | 1 ಮತ್ತು 2 | ಕನ್ನಡ |
| 4/12/2007 | ಮಂಗಳವಾರ | 77 | ಧನ್ಯವಾದ | 1 ಮತ್ತು 2 | ಕನ್ನಡ |
| 5/12/2007 | ಬುಧವಾರ | 78 | ನಾನು ನನ್ನ ಹಾಗೆ | 1 ಮತ್ತು 2 | ಪ.ಅಧ್ಯಯನ |
| 6/12/2007 | ಗುರುವಾರ | 79 | ನಾನು ಎಲ್ಲರ ಹಾಗೆ | 1 ಮತ್ತು 2 | ಪ.ಅಧ್ಯಯನ |
| 7/12/2007 | ಶುಕ್ರವಾರ | 80 | Lesson 18 | 1 ಮತ್ತು 2 | ಇಂಗ್ಲಿಷ್ |
| 8/12/2007 | ಶನಿವಾರ | | Lesson 17 | 1 ಮತ್ತು 2 | ಪುನರಾವರ್ತನೆ |
| 10/12/2007 | ಸೋಮವಾರ | 81 | ಜೀವ ಕೊಡುವ ಸೂರ್ಯ | 3 | ಪ.ಅಧ್ಯಯನ |
| 11/12/2007 | ಮಂಗಳವಾರ | 82 | ಶಕ್ತಿ ಕೊಡುವ ಸೂರ್ಯ | 3 | ಪ.ಅಧ್ಯಯನ |
| 12/12/2007 | ಬುಧವಾರ | 83 | Lesson 19 | 1 ಮತ್ತು 2 | ಇಂಗ್ಲಿಷ್ |
| 13/12/2007 | ಗುರುವಾರ | 84 | Lesson 20 | 1 ಮತ್ತು 2 | ಇಂಗ್ಲಿಷ್ |
| 2/1/208 | ಬುಧವಾರ | 85 | ದೂರವ ಅಳೆಯೋಣ | 1 ಮತ್ತು 2 | ಗಣಿತ |
| 3/1/208 | ಗುರುವಾರ | 86 | ಸರಿಯಾಗಿ ಅಳೆಯೋಣ | 1 ಮತ್ತು 2 | ಗಣಿತ |
| 4/1/2008 | ಶುಕ್ರವಾರ | 87 | Lesson 21 | 1 ಮತ್ತು 2 | ಇಂಗ್ಲಿಷ್ |
| 5/1/2007 | ಶನಿವಾರ | | Lesson 20 | 1 ಮತ್ತು 2 | ಪುನರಾವರ್ತನೆ |
| 7/1/2008 | ಸೋಮವಾರ | 88 | ನಮ್ಮ ಅಂದದ ನಾಡು | 3 | ಪ.ಅಧಯನ |
| 8/1/2008 | ಮಂಗಳವಾರ | 89 | ನಮ್ಮ ಚೆಂದದ ಕಾಡು | 3 | ಪ.ಅಧ್ಯಯನ |
| 9/1/2008 | ಬುಧವಾರ | 90 | ನಿಯಮ ಪಾಲನೆ | 1 ಮತ್ತು 2 | ಪ.ಅಧ್ಯಯನ |
| 10/1/2008 | ಗುರುವಾರ | 91 | Lesson 22 | 1 ಮತ್ತು 2 | ಇಂಗ್ಲಿಷ್ |
| 11/1/2008 | ಶುಕ್ರವಾರ | 92 | Lesson 23 | 1 ಮತ್ತು 2 | ಇಂಗ್ಲಿಷ್ |
| 12/1/2008 | ಶನಿವಾರ | | Lesson 22 | 1 ಮತ್ತು 2 | ಪುನರಾವರ್ತನೆ |
| 15/1/2008 | ಮಂಗಳವಾರ | 93 | ಗೌರವ ಪಾಲನೆ | 1 ಮತ್ತು 2 | ಪ.ಅಧ್ಯಯನ |
| 16/1/2008 | ಬುಧವಾರ | 94 | ಚೌಕದ ವಿಸ್ತೀರ್ಣ 3 | ಗಣಿತ | |
| 17/1/2008 | ಗುರುವಾರ | 95 | ಆಯತದ ವಿಸ್ತೀರ್ಣ | 3 | ಗಣಿತ |
| 18/1/2008 | ಶುಕ್ರವಾರ | 96 | Lesson 24 | 1 ಮತ್ತು 2 | ಇಂಗ್ಲಿಷ್ |
| 19/1/2008 | ಶನಿವಾರ | | Lesson 23 | 1 ಮತ್ತು 2 | ಪುನರಾವರ್ತನೆ |
| 21/1/2008 | ಸೋಮವಾರ | 97 | ದಿನದಿಂದ ದಿನಕ್ಕೆ | 1 ಮತ್ತು 2 | ಪ.ಅಧ್ಯಯನ |
| 22/1/2008 | ಮಂಗಳವಾರ | 98 | ತಿಂಗಳಿನಿಂದ ತಿಂಗಳಿಗೆ | 1 ಮತ್ತು 2 | ಪ.ಅಧ್ಯಯನ |
| 23/1/2008 | ಬುಧವಾರ | 99 | Lesson 25 | 1 ಮತ್ತು 2 | ಇಂಗ್ಲಿಷ್ |
| 24/1/2008 | ಗುರುವಾರ | 100 | Lesson 26 | 1ಮತ್ತು 2 | ಇಂಗ್ಲಿಷ್ |
| 25/1/2008 | ಶುಕ್ರವಾರ | 101 | Lesson 27 | 1ಮತ್ತು 2 | ಇಂಗ್ಲಿಷ್ |
| 28/1/2008 | ಸೋಮವಾರ | 102 | ಕಾಗೆಪುಕ್ಕ ಗುಬ್ಬಿ ಪುಕ್ಕ | 3 | ಕನ್ನಡ |
| 29/1/2008 | ಮಂಗಳವಾರ | 103 | ಕೆಂಪು ಕುಂಕುಮ ಕಪ್ಪು ಕುಂಕುಮ | 3 | ಕನ್ನಡ |
| 30/1/2008 | ಬುಧವಾರ | 104 | Lesson 28 | 1ಮತ್ತು 2 | ಇಂಗ್ಲಿಷ್ |
| 31/1/2008 | ಗುರುವಾರ | 105 | Lesson 29 | 1ಮತ್ತು 2 | ಇಂಗ್ಲಿಷ್ |
| 1/2/2008 | ಶುಕ್ರವಾರ | 106 | Lesson30 | | |
| 2/2/2008 | ಶನಿವಾರ | | Lesson 28 | 1 ಮತ್ತು 2 | ಪುನರಾವರ್ತನೆ |
| 4/2/2008 | ಸೋಮವಾರ | 107 | ನಿನ್ನೆಯ ಘಟನೆ-ಇಂದಿನ ಘಟನೆ | 1 ಮತ್ತು 2 | ಪ.ಅಧ್ಯಯನ |
| 5/2/2008 | ಮಂಗಳವಾರ | 108 | ಹಿಂದಿನ ಘಟನೆ-ಮುಂದಿನ ಘಟನೆ | 1 ಮತ್ತು 2 | ಪ.ಅಧ್ಯಯನ |
| 6/2/2008 | ಬುಧವಾರ | 109 | Lesson 31 | 1ಮತ್ತು 2 | ಇಂಗ್ಲಿಷ್ |
| 7/2/2008 | ಗುರುವಾರ | 110 | Lesson 32 | 1ಮತ್ತು 2 | ಇಂಗ್ಲಿಷ್ |
| 8/2/2008 | ಶುಕ್ರವಾರ | 111 | Lesson 33 | 1ಮತ್ತು 2 | ಇಂಗ್ಲಿಷ್ |

| | | | | | |
|---|---|---|---|---|---|
| 9/2/2008 | ಶನಿವಾರ | | Lesson 31 | 1 ಮತ್ತು 2 | ಪುನರಾವರ್ತನೆ |
| 11/2/2008 | ಸೋಮವಾರ | 112 | ಇದು ನಮ್ಮ ಆಸ್ತಿ | 3 | ಪ.ಅಧ್ಯಯನ |
| 12/2/2008 | ಮಂಗಳವಾರ | 113 | ಇದು ನಮ್ಮೆಲ್ಲರ ಆಸ್ತಿ | 3 | ಪ.ಅಧ್ಯಯನ |
| 13/2/2008 | ಬುಧವಾರ | 114 | Lesson34 | 1ಮತ್ತು 2 | ಇಂಗ್ಲಿಷ್ |
| 14/2/2008 | ಗುರುವಾರ | 115 | Lesson 35 | 1ಮತ್ತು 2 | ಇಂಗ್ಲಿಷ್ |
| 15/2/2008 | ಶುಕ್ರವಾರ | 116 | Lesson 36 | 1ಮತ್ತು 2 | ಇಂಗ್ಲಿಷ್ |
| 16/2/2008 | ಶನಿವಾರ | | Lesson34 | 1 ಮತ್ತು 2 | ಪುನರಾವರ್ತನೆ |
| 18/2/2008 | ಸೋಮವಾರ | 117 | ಈಗೇನು ಬದಲಾವಣೆ? | 1 ಮತ್ತು 2 | ಪ.ಅಧ್ಯಯನ |
| 19/2/2008 | ಮಂಗಳವಾರ | 118 | ಮುಂದೇನು ಬದಲಾವಣೆ? | 1 ಮತ್ತು 2 | ಪ.ಅಧ್ಯಯನ |
| 20/2/2008 | ಬುಧವಾರ | 119 | Lesson 37 | 1 ಮತ್ತು 2 | ಇಂಗ್ಲಿಷ್ |
| 21/2/2008 | ಗುರುವಾರ | 120 | Lesson 38 | 1 ಮತ್ತು 2 | ಇಂಗ್ಲಿಷ್ |
| 22/2/2008 | ಶುಕ್ರವಾರ | 121 | Lesson 39 | 1 ಮತ್ತು 2 | ಇಂಗ್ಲಿಷ್ |
| 23/2/2008 | ಶನಿವಾರ | | Lesson 37 | 1 ಮತ್ತು 2 | ಪುನರಾವರ್ತನೆ |
| 25/2/2008 | ಸೋಮವಾರ | 122 | ಇದು ಯಾಕೆ ಹೀಗೆ? | 3 | ವೈಜ್ಞಾನಿಕ ಚಿಂತನೆ |
| 26/2/2008 | ಮಂಗಳವಾರ | 123 | ಓಹೋ ಇದು ಹೀಗೆ! | 3 | ವೈಜ್ಞಾನಿಕ ಚಿಂತನೆ |
| 27/2/2008 | ಬುಧವಾರ | 124 | Lesson 40 | 1 ಮತ್ತು 2 | ಇಂಗ್ಲಿಷ್ |
| 28/2/2008 | ಗುರುವಾರ | 125 | Lesson 41 | 1 ಮತ್ತು 2 | ಇಂಗ್ಲಿಷ್ |
| 29/2/2008 | ಶುಕ್ರವಾರ | 126 | Lesson 42 | 1 ಮತ್ತು 2 | ಇಂಗ್ಲಿಷ್ |
| 1/3/2008 | ಶನಿವಾರ | | Lesson 40 | 1 ಮತ್ತು 2 | ಪುನರಾವರ್ತನೆ |
| 3/3/2008 | ಸೋಮವಾರ | 127 | Lesson 43 | 1 ಮತ್ತು 2 | ಇಂಗ್ಲಿಷ್ |
| 4/3/2008 | ಮಂಗಳವಾರ | 128 | Lesson 44 | 1 ಮತ್ತು 2 | ಇಂಗ್ಲಿಷ್ |
| 5/3/2008 | ಬುಧವಾರ | 129 | Lesson 45 | 1 ಮತ್ತು 2 | ಇಂಗ್ಲಿಷ್ |
| 6/3/2008 | ಗುರುವಾರ | 130 | ಯಾಕೆ ಹೀಗಾಯ್ತು? | 1 ಮತ್ತು 2 | ವೈಜ್ಞಾನಿಕ ಚಿಂತನೆ |
| 7/3/2008 | ಶುಕ್ರವಾರ | 131 | ಆಮೇಲೆ ಏನಾಯ್ತು? | 1 ಮತ್ತು 2 | ವೈಜ್ಞಾನಿಕ ಚಿಂತನೆ |
| 8/3/2008 | ಶನಿವಾರ | | Lesson43 | 1 ಮತ್ತು 2 | ಪುನರಾವರ್ತನೆ |
| 10/3/2008 | ಸೋಮವಾರ | 132 | Lesson 46 | 1 ಮತ್ತು 2 | ಇಂಗ್ಲಿಷ್ |
| 11/3/2008 | ಮಂಗಳವಾರ | 133 | Lesson 47 | 1 ಮತ್ತು 2 | ಇಂಗ್ಲಿಷ್ |
| 12/3/2008 | ಬುಧವಾರ | 134 | Lesson 48 | 1 ಮತ್ತು 2 | ಇಂಗ್ಲಿಷ್ |
| 13/3/2008 | ಗುರುವಾರ | 135 | Lesson 49 | 1 ಮತ್ತು 2 | ಇಂಗ್ಲಿಷ್ |
| 14/3/2008 | ಶುಕ್ರವಾರ | 136 | Lesson 50 | 1 ಮತ್ತು 2 | ಇಂಗ್ಲಿಷ್ |

**2007–08 ನೇ ಸಾಲಿನ ಚುಕ್ಕಿ ಚಿನ್ನಾ ಅಂತರ ಕ್ರಿಯಾತ್ಮಕ ರೇಡಿಯೋ ಶಿಕ್ಷಣ (ಐ.ಆರ್.ಐ) ಕಾರ್ಯಕ್ರಮ ಸರಣಿಯ ಪ್ರಸಾರ ಸೂಚಿ**

**(ಜುಲೈ 2007 ರಿಂದ ಮಾರ್ಚ್ 2008 ರವರೆಗೆ) ತರಗತಿ: 4 ಮತ್ತು 5**

| ದಿನಾಂಕ | ದಿನ | | ಕಾರ್ಯಕ್ರಮ | ವಿಷಯ |
|---|---|---|---|---|
| 9/7/2007 | ಸೋಮವಾರ | 1 | ಆಲಿಸು ಅನುಸರಿಸು | ಪರಿಚಾಯತ್ಮಕ ಘಟಕ |
| 10/7/2007 | ಮಂಗಳವಾರ | 2 | ಇನ್ನಷ್ಟು ಆಲಿಸು, ಇನ್ನಷ್ಟು ಅನುಸರಿಸು | ಪರಿಚಾಯತ್ಮಕ ಘಟಕ |
| 11/7/2007 | ಬುಧವಾರ | 3 | ಸಜೀವಿಗಳ ಗುಣಲಕ್ಷಣಗಳು | ವಿಜ್ಞಾನ |
| 12/7/2007 | ಗುರುವಾರ | 4 | ಪ್ರಾಣಿಗಳ ವರ್ಗೀಕರಣ | ವಿಜ್ಞಾನ |
| 13/7/2007 | ಶುಕ್ರವಾರ | 5 | ಕೀಟಗಳು | ವಿಜ್ಞಾನ |
| 16/7/2007 | ಸೋಮವಾರ | 6 | ಅವಲೋಕನ – ಭಾಗ 1 | ಕನ್ನಡ |
| 17/07/2007 | ಮಂಗಳವಾರ | 7 | ಅವಲೋಕನ – ಭಾಗ 2 | ಕನ್ನಡ |
| 18/07/2007 | ಬುಧವಾರ | 8 | ಅವಲೋಕನ – ಭಾಗ 3 | ಕನ್ನಡ |
| 19/07/2007 | ಗುರುವಾರ | 9 | ನಾನು ಮತ್ತು ನನ್ನ ಕುಟುಂಬ | ಸಮಾಜ ವಿಜ್ಞಾನ |

| | | | | |
|---|---|---|---|---|
| 20/07/2007 | ಶುಕ್ರವಾರ | 10 | ನನ್ನ ಸಮುದಾಯದ ಇತಿಹಾಸ | ಸಮಾಜ ವಿಜ್ಞಾನ |
| 23/07/2007 | ಸೋಮವಾರ | 11 | ಕರ್ನಾಟಕದ ಇತಿಹಾಸ | ಸಮಾಜ ವಿಜ್ಞಾನ |
| 24/07/2007 | ಮಂಗಳವಾರ | 12 | ನಿತ್ಯಜೀವನದ ಘಟನೆಗಳ ದಾಖಲೀಕರಣ | ಸಮಾಜ ವಿಜ್ಞಾನ |
| 25/07/2007 | ಬುಧವಾರ | 13 | English is beautiful | ಇಂಗ್ಲಿಷ್ |
| 26/07/2007 | ಗುರುವಾರ | 14 | English is fun to learn | ಇಂಗ್ಲಿಷ್ |
| 7/07/2007 | ಶುಕ್ರವಾರ | 15 | ಮೀನುಗಳು ಮತ್ತು ಸರೀಸೃಪಗಳು | ವಿಜ್ಞಾನ |
| 30/07/2007 | ಸೋಮವಾರ | 16 | ಹಕ್ಕಿಗಳು | ವಿಜ್ಞಾನ |
| 31/07/2007 | ಮಂಗಳವಾರ | 17 | ಸಸ್ತನಿಗಳು | ವಿಜ್ಞಾನ |
| 1/8/2007 | ಬುಧವಾರ | 18 | ಜೀವಿಗಳ ಉಳಿವು ಮತ್ತು ಹೊಂದಾಣಿಕೆ | ವಿಜ್ಞಾನ |
| 2/8/2007 | ಗುರುವಾರ | 19 | ದ್ಯುತಿ ಸಂಶ್ಲೇಷಣೆ | ವಿಜ್ಞಾನ |
| 3/8/2007 | ಶುಕ್ರವಾರ | 20 | ಆದಿ ಮಾನವರು ಮತ್ತು ಆವಿಷ್ಕಾರಗಳು | ಸಮಾಜ ವಿಜ್ಞಾನ |
| 6/8/2007 | ಸೋಮವಾರ | 21 | ಸಾಮಾಜಿಕ ವ್ಯವಸ್ಥೆ-ಸಿಂಧೂ ಕಣಿವೆಯ ನಾಗರೀಕತೆ | ಸಮಾಜ ವಿಜ್ಞಾನ |
| 7/8/2007 | ಮಂಗಳವಾರ | 22 | It is an animal | ಇಂಗ್ಲಿಷ್ |
| 8/8/2007 | ಬುಧವಾರ | 23 | What is this, what is that -1 | ಇಂಗ್ಲಿಷ್ |
| 9/8/2007 | ಗುರುವಾರ | 24 | What is this, what is that -2 | ಇಂಗ್ಲಿಷ್ |
| 10/8/2007 | ಶುಕ್ರವಾರ | 25 | ಶಕ್ತಿಯ ಮೂಲಗಳು | ವಿಜ್ಞಾನ |
| 13/08/2007 | ಸೋಮವಾರ | 26 | ನವೀಕರಣಗೊಳ್ಳುವ ಮತ್ತು ನವೀಕರಣಗೊಳ್ಳದ ಶಕ್ತಿಯ ಮೂಲಗಳು | ವಿಜ್ಞಾನ |
| 14/08/2007 | ಮಂಗಳವಾರ | 27 | ಜೈವಿಕ ಅನಿಲ ಮತ್ತು ಇಂಧನ | ವಿಜ್ಞಾನ |
| 16/08/2007 | ಗುರುವಾರ | 28 | ಶಕ್ತಿಯ ಸಂರಕ್ಷಣೆ | ವಿಜ್ಞಾನ |
| 17/08/2007 | ಶುಕ್ರವಾರ | 29 | ದಶಮಾಂಶ ಎಂದರೇನು? | ಗಣಿತ |
| 20/08/2007 | ಸೋಮವಾರ | 30 | ದಶಮಾಂಶವನ್ನು ಓದುವುದು | ಗಣಿತ |
| 21/08/2007 | ಮಂಗಳವಾರ | 31 | ದಶಮಾಂಶಗಳ ಸ್ಥಾನಬೆಲೆ | ಗಣಿತ |
| 22/08/2007 | ಬುಧವಾರ | 32 | 0ಯಾರು ಏನು ಮಾಡಿದರು? | ಕನ್ನಡ |
| 23/08/2007 | ಗುರುವಾರ | 33 | ನನ್ನ ಪರಿಚ0ಯ | ಕನ್ನಡ |
| 30/8/2007 | ಗುರುವಾರ | 34 | ಹೊಂದಾಣಿಕೆ | ಕನ್ನಡ |
| 31/08/2007 | ಶುಕ್ರವಾರ | 35 | ಖಂಡಗಳು ಮತ್ತು ಸಾಗರಗಳು | ಸಮಾಜ ವಿಜ್ಞಾನ |
| 3/9/2007 | ಸೋಮವಾರ | 36 | ಭೂಮಿಯ ದೈನಂದಿನ ಚಲನೆ-ಹಗಲು ಮತ್ತು ರಾತ್ರಿ | ಸಮಾಜ ವಿಜ್ಞಾನ |
| 5/9/2007 | ಬುಧವಾರ | 37 | ಭೂಮಿಯ ವಾರ್ಷಿಕ ಚಲನೆ-ಋತುಗಳು | ಸಮಾಜ ವಿಜ್ಞಾನ |
| 6/9/2007 | ಗುರುವಾರ | 38 | ಭೂಮಿಯ ಸ್ವರೂಪಗಳು | ಸಮಾಜ ವಿಜ್ಞಾನ |
| 7/9/2007 | ಶುಕ್ರವಾರ | 39 | ನೀರಿನ ಉಪಯೋಗಗಳು | ವಿಜ್ಞಾನ |
| 10/9/2007 | ಸೋಮವಾರ | 40 | ನೀರಿನ ಚಕ್ರ | ವಿಜ್ಞಾನ |
| 11/9/2007 | ಮಂಗಳವಾರ | 41 | ನೀರಿನ ಸಂರಕ್ಷಣೆ | ವಿಜ್ಞಾನ |
| 12/9/2007 | ಬುಧವಾರ | 42 | ತೂಕ ಮತ್ತು ತೂಕದ ಅಳತೆ | ಗಣಿತ |
| 3/10/2007 | ಬುಧವಾರ | 43 | ಗೋಲ-ಭೂಮಿಯ ಮಾದರಿ | ಸಮಾಜ ವಿಜ್ಞಾನ |
| 4/10/2007 | ಗುರುವಾರ | 44 | ನಕಾಶೆ ಮತ್ತು ಗೋಲಕ್ಕಿರುವ ಸಂಬಂಧ | ಸಮಾಜ ವಿಜ್ಞಾನ |
| 5/10/2007 | ಶುಕ್ರವಾರ | 45 | ಅಕ್ಷಾಂಶ ಮತ್ತು ರೇಖಾಂಶಗಳು | ಸಮಾಜ ವಿಜ್ಞಾನ |
| 8/10/2007 | ಸೋಮವಾರ | 46 | ಹೀಗೆ ಮಾಡಿ | ಕನ್ನಡ |
| 9/10/2007 | ಮಂಗಳವಾರ | 47 | ನನಗೆ ಬೇಕು ಏನು ಬೇಕು? | ಕನ್ನಡ |
| 11/10/2007 | ಗುರುವಾರ | 48 | ಏನಿದೆ, ಹೇಗಿದೆ? | ಕನ್ನಡ |
| 15/10/2007 | ಸೋಮವಾರ | 49 | ಮಾನವ ದೇಹ-ಅಂಗಗಳು | ವಿಜ್ಞಾನ |
| 16/10/2007 | ಮಂಗಳವಾರ | 50 | ಅಂಗವ್ಯೂಹಗಳು-ಅಸ್ಥಿವ್ಯೂಹ ಮತ್ತು ನರವ್ಯೂಹ | ವಿಜ್ಞಾನ |
| 17/10/2007 | ಬುಧವಾರ | 51 | ಮಾನವ ಅಂಗವ್ಯೂಹಗಳು-ಉಸಿರಾಟ ಮತ್ತು ಜೀರ್ಣಾಂಗ ವ್ಯೂಹ | ವಿಜ್ಞಾನ |

| | | | | |
|---|---|---|---|---|
| 19/10/2007 | ಶುಕ್ರವಾರ | 52 | This is my body | ಇಂಗ್ಲಿಷ್ |
| 22/10/2007 | ಸೋಮವಾರ | 53 | Whose is this? | ಇಂಗ್ಲಿಷ್ |
| 23/10/2007 | ಮಂಗಳವಾರ | 54 | Whose are these? | ಇಂಗ್ಲಿಷ್ |
| 24/10/2007 | ಬುಧವಾರ | 55 | ಪೌರತ್ವ- ಹಕ್ಕು ಮತ್ತು ಕರ್ತವ್ಯಗಳು- 1 | ಸಮಾಜ ವಿಜ್ಞಾನ |
| 25/10/2007 | ಗುರುವಾರ | 56 | ಪೌರತ್ವ- ಹಕ್ಕು ಮತ್ತು ಕರ್ತವ್ಯಗಳು-2 | ಸಮಾಜ ವಿಜ್ಞಾನ |
| 26/10/2007 | ಶುಕ್ರವಾರ | 57 | ಸಾರ್ವಜನಿಕ ಆಸ್ತಿ ಮತ್ತು ಅದರ ರಕ್ಷಣೆ | ಸಮಾಜ ವಿಜ್ಞಾನ |
| 29/10/2007 | ಸೋಮವಾರ | 58 | ದ್ರವಗಳ ಅಳತೆ | ಗಣಿತ |
| 30/10/2007 | ಮಂಗಳವಾರ | 59 | ನಾವು ಮತ್ತು ನಮ್ಮ ಆಹಾರ | ವಿಜ್ಞಾನ |
| 31/10/2007 | ಬುಧವಾರ | 60 | ಆಹಾರದಲ್ಲೇನಿದೆ? | ವಿಜ್ಞಾನ |
| 5/11/2007 | ಸೋಮವಾರ | 61 | ಸಮತೂಕದ ಆಹಾರ ಮತ್ತು ಪೋಷಕಾಂಶಗಳ ಕೊರತೆ | ವಿಜ್ಞಾನ |
| 6/11/2007 | ಮಂಗಳವಾರ | 62 | ಹವಾಮಾನ ಮತ್ತು ವಾಯುಗುಣ-ಭಾಗ 1 | ಸಮಾಜ ವಿಜ್ಞಾನ |
| 7/11/2007 | ಬುಧವಾರ | 63 | ಹವಾಮಾನ ಮತ್ತು ವಾಯುಗುಣ- ಮಾರುತಗಳು | ಸಮಾಜ ವಿಜ್ಞಾನ |
| 9/11/2007 | ಶುಕ್ರವಾರ | 64 | ಸಮಾಜ ಸುಧಾರಣೆ ಪ್ರಕ್ರಿಯೆ | ಸಮಾಜ ವಿಜ್ಞಾನ |
| 12/11/2007 | ಸೋಮವಾರ | 65 | ಪೂರ್ಣ ಮತ್ತು ಭಿನ್ನರಾಶಿ | ಗಣಿತ |
| 13/11/2007 | ಮಂಗಳವಾರ | 66 | ಭಿನ್ನರಾಶಿಗಳ ವಿಧಗಳು | ಗಣಿತ |
| 14/11/2007 | ಬುಧವಾರ | 67 | ಭಿನ್ನರಾಶಿಗಳ ಪರಿವರ್ತನೆ | ಗಣಿತ |
| 15/11/2007 | ಗುರುವಾರ | 68 | ನನ್ನ ಹಳ್ಳಿ | ಸಮಾಜ ವಿಜ್ಞಾನ |
| 16/11/2007 | ಶುಕ್ರವಾರ | 69 | ಕರ್ನಾಟಕ ಮತ್ತು ನೆರೆಹೊರೆ | ಸಮಾಜ ವಿಜ್ಞಾನ |
| 19/11/2007 | ಸೋಮವಾರ | 70 | ಭಾರತ | ಸಮಾಜ ವಿಜ್ಞಾನ |
| 20/11/2007 | ಮಂಗಳವಾರ | 71 | Colours everywhere | ಇಂಗ್ಲಿಷ್ |
| 21/11/2007 | ಬುಧವಾರ | 72 | Numbers | ಇಂಗ್ಲಿಷ್ |
| 22/11/2007 | ಗುರವಾರ | 73 | Colours and Number | ಇಂಗ್ಲಿಷ್ |
| 23/11/2007 | ಶುಕ್ರವಾರ | 74 | ಭಿನ್ನರಾಶಿಗಳ ಸಂಕಲನ | ಗಣಿತ |
| 28/11/2007 | ಬುಧವಾರ | 75 | ಭಿನ್ನರಾಶಿಗಳ ವ್ಯವಕಲನ | ಗಣಿತ |
| 29/11/2007 | ಗುರವಾರ | 76 | ಭಿನ್ನರಾಶಿಗಳ ಗುಣಾಕಾರ | ಗಣಿತ |
| 30/11/2007 | ಶುಕ್ರವಾರ | 77 | ಭಿನ್ನರಾಶಿಗಳ ಭಾಗಾಕಾರ | ಗಣಿತ |
| 3/12/2007 | ಸೋಮವಾರ | 78 | ಕ್ರಿಯೆಯ ಪರಿಣಾಮ | ಕನ್ನಡ |
| 4/12/2007 | ಮಂಗಳವಾರ | 79 | ಕರ್ಮಪದ ಎಂದರೇನು? | ಕನ್ನಡ |
| 5/12/2007 | ಬುಧವಾರ | 80 | ಅರ್ಥಪೂರ್ಣ ಮಾತು | ಕನ್ನಡ |
| 6/12/2007 | ಗುರುವಾರ | 81 | ಗಾಳಿಯ ಘಟಕಗಳು | ವಿಜ್ಞಾನ |
| 7/12/2007 | ಶುಕ್ರವಾರ | 82 | ಗಾಳಿಯ ಒತ್ತಡ | ವಿಜ್ಞಾನ |
| 10/12/2007 | ಸೋಮವಾರ | 83 | ವಾಯು ಮಾಲಿನ್ಯ | ವಿಜ್ಞಾನ |
| 11/12/2007 | ಮಂಗಳವಾರ | 84 | ಯಾಕೆ ಅನ್ನುವ ಕಾರಣ | ಕನ್ನಡ |
| 12/12/2007 | ಬುಧವಾರ | 85 | ಹೀಗೆ ಅನ್ನುವ ಹೂರಣ | ಕನ್ನಡ |
| 13/12/2007 | ಗುರುವಾರ | 86 | ಯಾಕಯ್ತು? ಹೇಗಾಯ್ತು? | ಕನ್ನಡ |
| 2/1/2008 | ಬುಧವಾರ | 87 | ಯಾರು ಯಾರನ್ನು? | ಕನ್ನಡ |
| 3/1/2008 | ಗುರುವಾರ | 88 | ಎಲ್ಲಿಂದ ಎಲ್ಲಿಗೆ? | ಕನ್ನಡ |
| 4/1/2008 | ಶುಕ್ರವಾರ | 89 | ಯಾರು ಯಾರನ್ನು?ಎಲ್ಲಿಂದ ಎಲ್ಲಿಗೆ? | ಕನ್ನಡ |
| 7/1/2008 | ಸೋಮವಾರ | 90 | ಉದ್ದ ಮತ್ತು ಸುತ್ತಳತೆ | ಗಣಿತ |
| 8/1/2008 | ಮಂಗಳವಾರ | 91 | ವಿಸ್ತೀರ್ಣ | ಗಣಿತ |
| 9/1/2008 | ಬುಧವಾರ | 92 | ನಕಾಶೆಗಳನ್ನು ಉಪಯೋಗಿಸೋಣ | ಸಮಾಜ ವಿಜ್ಞಾನ |
| 10/1/2008 | ಗುರುವಾರ | 93 | ವಿಶಾಲ ಪ್ರದೇಶದ ನಕಾಶೆ | ಸಮಾಜ ವಿಜ್ಞಾನ |

| | | | | |
|---|---|---|---|---|
| 11/1/2008 | ಶುಕ್ರವಾರ | 94 | ಇದು ಯಾವ ದಿಕ್ಕು? | ಸಮಾಜ ವಿಜ್ಞಾನ |
| 15/1/2008 | ಮಂಗಳವಾರ | 95 | ದಶಮಾಂಶಗಳ ಸಂಕಲನ | ಗಣಿತ |
| 16/1/2008 | ಬುಧವಾರ | 96 | ದಶಮಾಂಶಗಳ ವ್ಯವಕಲನ | ಗಣಿತ |
| 17/1/2008 | ಗುರುವಾರ | 97 | ದಶಮಾಂಶಗಳ ಗುಣಾಕಾರ | ಗಣಿತ |
| 18/1/2008 | ಶುಕ್ರವಾರ | 98 | ದಶಮಾಂಶಗಳ ಭಾಗಾಕಾರ | ಗಣಿತ |
| 21/1/2008 | ಸೋಮವಾರ | 99 | ತಿಮ್ಮನಿಂದ | ಕನ್ನಡ |
| 22/1/2008 | ಮಂಗಳವಾರ | 100 | ಹೇ, ಯಾರಲ್ಲಿ? | ಕನ್ನಡ |
| 23/1/2008 | ಬುಧವಾರ | 101 | ಯಾಕೆ ಹೇಳಿ? | ಕನ್ನಡ |
| 24/1/2008 | ಗುರುವಾರ | 102 | ಸ್ಥಳೀಯ ಸ್ವಯಂ ಆಡಳಿತ | ಸಮಾಜ ವಿಜ್ಞಾನ |
| 25/1/2008 | ಶುಕ್ರವಾರ | 103 | ಕೋನ ಎಂದರೇನು? | ಗಣಿತ |
| 28/1/2008 | ಸೋಮವಾರ | 104 | ಕೋನಗಳ ವಿಧಗಳು | ಗಣಿತ |
| 29/1/2008 | ಮಂಗಳವಾರ | 105 | ಆಕೃತಿಗಳು | ಗಣಿತ |
| 30/1/2008 | ಬುಧವಾರ | 106 | ಸಮಮಿತಿ | ಗಣಿತ |
| 31/1/2008 | ಗುರುವಾರ | 107 | I am Putti | ಇಂಗ್ಲಿಷ್ |
| 1/2/2008 | ಶುಕ್ರವಾರ | 108 | This is my friend | ಇಂಗ್ಲಿಷ್ |
| 4/2/2008 | ಸೋಮವಾರ | 109 | We are friends | ಇಂಗ್ಲಿಷ್ |
| 5/2/2008 | ಮಂಗಳವಾರ | 110 | ನನಗೊಂದು ಒಗಟು ಹೇಳು? | ಕನ್ನಡ |
| 6/2/2008 | ಬುಧವಾರ | 111 | ಇದನ್ನು ಬಿಡಿಸು | ಕನ್ನಡ |
| 7/2/2008 | ಗುರುವಾರ | 112 | ನನಗೆ ಗೊತ್ತಾಯ್ತು | ಕನ್ನಡ |
| 8/2/2008 | ಶುಕ್ರವಾರ | 113 | ಸಾಂಕ್ರಾಮಿಕ ರೋಗಗಳು–ಮಲೇರಿಯ | ವಿಜ್ಞಾನ |
| 11/2/2008 | ಸೋಮವಾರ | 114 | ಕಲುಷಿತ ನೀರು ಮತ್ತು ಆಹಾರದಿಂದ ಹರಡುವ ರೋಗಗಳು | ವಿಜ್ಞಾನ |
| 12/2/2008 | ಮಂಗಳವಾರ | 115 | ಸೂಕ್ಷ್ಮಾಣುಜೀವಿಗಳು ಮತ್ತು ರೋಗಗಳು | ವಿಜ್ಞಾನ |
| 13/2/2008 | ಬುಧವಾರ | 116 | ಶುಚಿತ್ವ ಮತ್ತು ನೈರ್ಮಲ್ಯ | ವಿಜ್ಞಾನ |
| 14/2/2008 | ಗುರುವಾರ | 117 | Iam playing | ಇಂಗ್ಲಿಷ್ |
| 15/2/2008 | ಶುಕ್ರವಾರ | 118 | I am reading | ಇಂಗ್ಲಿಷ್ |
| 18/2/2008 | ಸೋಮವಾರ | 119 | We are laughing | ಇಂಗ್ಲಿಷ್ |
| 19/2/2008 | ಮಂಗಳವಾರ | 120 | ನಿಸರ್ಗ ಸಮತೋಲನ | ಸಮಾಜ ವಿಜ್ಞಾನ |
| 20/2/2008 | ಬುಧವಾರ | 121 | ಪರಿಸರ ಮತ್ತು ರಕ್ಷಿತ ಅರಣ್ಯಗಳು | ಸಮಾಜ ವಿಜ್ಞಾನ |
| 21/2/2008 | ಗುರುವಾರ | 122 | Where are you? | ಇಂಗ್ಲಿಷ್ |
| 22/2/2008 | ಶುಕ್ರವಾರ | 123 | Here I am! | ಇಂಗ್ಲಿಷ್ |
| 25/2/2008 | ಸೋಮವಾರ | 124 | We are here | ಇಂಗ್ಲಿಷ್ |
| 26/2/2008 | ಮಂಗಳವಾರ | 125 | ನಮ್ಮ ವಿಶೇಷಣಗಳು | ಕನ್ನಡ |
| 27/2/2008 | ಬುಧವಾರ | 126 | ಗುಣ ವಿಶೇಷಣಗಳು | ಕನ್ನಡ |
| 28/2/2008 | ಗುರುವಾರ | 127 | ಸಂಭಾಷಣೆಯಲ್ಲಿ ನಾಮ ವಿಶೇಷಗಳು | ಕನ್ನಡ |
| 29/2/2008 | ಶುಕ್ರವಾರ | 128 | ದಶಮಾಂಶಗಳ ಹೋಲಿಕೆ | ಗಣಿತ |
| 3/3/2008 | ಸೋಮವಾರ | 129 | ದಶಮಾಂಶವನ್ನು ಶೇಕಡಾ ರೂಪದಲ್ಲಿ ವ್ಯಕ್ತಪಡಿಸುವುದು | ಗಣಿತ |
| 4/3/2008 | ಮಂಗಳವಾರ | 130 | ದಶಮಾಂಶದಿಂದ ಭಿನ್ನರಾಶಿಗೆ ಪರಿವರ್ತನೆ | ಗಣಿತ |
| 5/3/2008 | ಬುಧವಾರ | 131 | ಭಿನ್ನರಾಶಿಯಿಂದ ದಶಮಾಂಶಕ್ಕೆ ಪರಿವರ್ತನೆ | ಗಣಿತ |
| 6/3/2008 | ಗುರುವಾರ | 132 | ಕ್ರಿಯಾ ವಿಶೇಷಣ | ಕನ್ನಡ |
| 7/3/2008 | ಶುಕ್ರವಾರ | 133 | ಕ್ರಿಯಾ ವಿಶೇಷಣಗಳ ಬಳಕೆ | ಕನ್ನಡ |
| 10/3/2008 | ಸೋಮವಾರ | 134 | ಸಂಭಾಷಣೆಯಲ್ಲಿ ಕ್ರಿಯಾ ವಿಶೇಷಣಗಳು | ಕನ್ನಡ |

ಪ್ರಸಾರ ಸಮಯ–ಸೋಮವಾರದಿಂದ ಶುಕ್ರವಾರದವರೆಗೆ ಮಧ್ಯಾಹ್ನ–11.30 ರಿಂದ 12.00 6,7 ಮತ್ತು 8 ನೇ ತರಗತಿಗಾಗಿ
2007–08 ನೇ ಸಾಲಿನ ಕೇಳಿಕಲಿ ರೇಡಿಯೋ ಶಿಕ್ಷಣ ಕಾರ್ಯಕ್ರಮ ಸರಣಿಗಳ ಪ್ರಸಾರ ಸೂಚಿ(ಜುಲೈ 2007 ರಿಂದ ಮಾರ್ಚ 2008 ರವರೆಗೆ)

| | ದಿನಾಂಕ | ದಿನ | ಕಾರ್ಯಕ್ರಮ | ತರಗತಿ | ವಿಷಯ | ಕೋಡ್ |
|---|---|---|---|---|---|---|
| 1 | 9/7/2007 | ಸೋಮವಾರ | WHAT'S THE TROBULE | 6 | ಇಂಗ್ಲೀಷ್ | E1 |
| 2 | 10/7/ 2007 | ಮಂಗಳವಾರ | ಘಾತ ಸಂಖ್ಯೆ | 6 | ಗಣಿತ | M1 |
| 3 | 11/7/2007 | ಬುಧವಾರ | ಸೋದರ ವಾತ್ಸಲ್ಯ | 7 | ಕನ್ನಡ | K1 |
| 4 | 12/7/2007 | ಗುರುವಾರ | ಪೂರ್ಣಾಂಕ | 7 | ಗಣಿತ | M1 |
| 5 | 13/7/2007 | ಶುಕ್ರವಾರ | ಸ್ವಾಭಾವಿಕ ಸಂಖ್ಯೆಗಳು | 8 | ಗಣಿತ | M1 |
| 6 | 16/7/2007 | ಸೋಮವಾರ | ಮಧ್ಯಯುಗೀನ ಭಾರತ–ರಜಪೂತರು | 6 | ಸಮಾಜ ವಿಜ್ಞಾನ | SS1 |
| 7 | 17/7/2007 | ಮಂಗಳವಾರ | ನಿತ್ಯ ಜೀವನದಲ್ಲಿ ವಿಜ್ಞಾನ | 6 | ವಿಜ್ಞಾನ | SC1 |
| 8 | 18/7/2007 | ಬುಧವಾರ | THE WISE JUDGE | 7 | ಇಂಗ್ಲೀಷ್ | E1 |
| 9 | 19/7/2007 | ಗುರುವಾರ | THE LEGEND OF NARMADA | 8 | ಇಂಗ್ಲೀಷ್ | E1 |
| 10 | 20/7/2007 | ಶುಕ್ರವಾರ | ಕಾಂತತ್ವ ವಿದ್ಯುತ್ ಶಕ್ತಿ | 8 | ವಿಜ್ಞಾನ | SC1 |
| 11 | 23/7/2007 | ಸೋಮವಾರ | ಕರಾವಳಿ ಕೇಸರಿ | 6 | ಕನ್ನಡ | K1 |
| 12 | 24/7/2007 | ಮಂಗಳವಾರ | ಪಂಚಮಾನ ಪದ್ಧತಿ | 6 | ಗಣಿತ | M2 |
| 13 | 25/7/2007 | ಬುಧವಾರ | ಸಜೀವಿಗಳ ಜೀವ ವ್ಯವಸ್ಥೆ | 7 | ವಿಜ್ಞಾನ | SC1 |
| 14 | 26/7/2007 | ಗುರುವಾರ | ಮತ ಸುಧಾರಣೆ | 7 | ಸಮಾಜ ವಿಜ್ಞಾನ | SS1 |
| 15 | 27/7/2007 | ಶುಕ್ರವಾರ | ಪರಿಸರ | 8 | ಸಮಾಜ ವಿಜ್ಞಾನ | SS1 |
| 16 | 30/7/2007 | ಸೋಮವಾರ | WHO'LL BELL THE CAT | 6 | ಇಂಗ್ಲೀಷ್ | E2 |
| 17 | 31/7/2007 | ಮಂಗಳವಾರ | ನಿತ್ಯಜೀವನದಲ್ಲಿ ವಿಜ್ಞಾನ | 6 | ವಿಜ್ಞಾನ | SC2 |
| 18 | 1/8/2007 | ಬುಧವಾರ | ನಮ್ಮ ಮಹಿಳೆಯರು | 7 | ಕನ್ನಡ | K2 |
| 19 | 2/8/2007 | ಗುರುವಾರ | ಬಸಯ್ಯ ಮತ್ತು ಜೇನುಗೂಡು | 8 | ಕನ್ನಡ | K1 |
| 20 | 3/8/2007 | ಶುಕ್ರವಾರ | ಬೀಜಗಣಿತದ ಮೂಲಕಲ್ಪನೆ | 8 | ಗಣಿತ | M2 |
| 21 | 6/8/2007 | ಸೋಮವಾರ | ದಸರಾ | 6 | ಕನ್ನಡ | K2 |
| 22 | 7/8/2007 | ಮಂಗಳವಾರ | ವಿಭಾಜ್ಯತೆಯ ನಿಯಮ | 6 | ಗಣಿತ | M3 |
| 23 | 8/8/2007 | ಬುಧವಾರ | ಸಿಮೋಲ್ಲಂಘನ | 7 | ಕನ್ನಡ | K3 |
| 24 | 9/8/2007 | ಗುರುವಾರ | ಭಿನ್ನರಾಶಿ | 7 | ಗಣಿತ | M2 |
| 25 | 10/8/2007 | ಶುಕ್ರವಾರ | ಜೀವಕ್ರಿಯ | 7 | ವಿಜ್ಞಾನ | SC2 |
| 26 | 13/8/2007 | ಸೋಮವಾರ | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು | 6 | ಸಮಾಜ ವಿಜ್ಞಾನ | SS2 |
| 27 | 14/8/2007 | ಮಂಗಳವಾರ | THE CHIPKO ARCHITECT | 8 | ಇಂಗ್ಲೀಷ್ | E2 |
| 28 | 16/8/2007 | ಗುರುವಾರ | ಇಲೆಕ್ಟ್ರಾನ್ ವಿನ್ಯಾಸ ಮತ್ತು ವಲಯ | 8 | ವಿಜ್ಞಾನ | SC2 |
| 29 | 17/8/2007 | ಶುಕ್ರವಾರ | ಕಾಣಿಕೆ(ಪದ್ಯ) | 6 | ಕನ್ನಡ | K13 |
| 30 | 20/8/2007 | ಸೋಮವಾರ | ದ್ರವ್ಯದ ಸ್ವರೂಪ ಮತ್ತು ಸಂಯೋಜನೆ | 7 | ವಿಜ್ಞಾನ | SC3 |
| 31 | 21/8/2007 | ಮಂಗಳವಾರ | ಕುಟುಂಬ ಮತ್ತು ಅದರ ಪ್ರಕಾರ | 8 | ಸಮಾಜ ವಿಜ್ಞಾನ | SS2 |
| 32 | 22/8/2007 | ಬುಧವಾರ | ಸಾಮಾಜಿಕ ಅಭಿವೃದ್ಧಿ | 7 | ಸಮಾಜ ವಿಜ್ಞಾನ | SS2 |
| 33 | 23/8/2007 | ಗುರುವಾರ | ನಮ್ಮ ಸುತ್ತಮುತ್ತಲಿನ ವಸ್ತುಗಳು | 6 | ವಿಜ್ಞಾನ | ಖಅ3 |
| 34 | 30/8/2007 | ಗುರುವಾರ | ಭಾರತದಲ್ಲಿ ಯುರೋಪಿಯನ್ನರ ಆಗಮನ | 7 | ಸಮಾಜ ವಿಜ್ಞಾನ | SS3 |
| 35 | 31/8/2007 | ಶುಕ್ರವಾರ | ದೇವರು ರುಜುಮಾಡಿದನು | 8 | ಕನ್ನಡ | K2 |
| 36 | 3/9/2007 | ಸೋಮವಾರ | ಸ್ವಯಂಸಿದ್ಧಗಳು | 8 | ಗಣಿತ | M3 |
| 37 | 5/9/2007 | ಬುಧವಾರ | THE MOON | 6 | ಇಂಗ್ಲೀಷ್ | E3 |
| 38 | 6/9/2007 | ಗುರುವಾರ | ಬೆಳಕು | 7 | ವಿಜ್ಞಾನ | SC4 |
| 39 | 7/9/2007 | ಶುಕ್ರವಾರ | KEEP YOUR HEART HEALTHY | 7 | ಇಂಗ್ಲೀಷ್ | E2 |
| 40 | 10/9/2007 | ಸೋಮವಾರ | ಬೀಜೋಕ್ತಿಗಳು | 7 | ಗಣಿತ | M3 |
| 41 | 11/9/2007 | ಮಂಗಳವಾರ | ಆವರ್ತಕ ಚಲನೆ ತರಂಗ | 8 | ವಿಜ್ಞಾನ | SC3 |
| 42 | 12/9/2007 | ಬುಧವಾರ | ಸಂಗೀತ ಸಾಮ್ರಾಜ್ಞಿ ಸುಬ್ಬುಲಕ್ಷ್ಮಿ | 6 | ಕನ್ನಡ | K4 |
| 43 | 3/10/2007 | ಬುಧವಾರ | ಭಾರತ ಸೇವಾದಲ | 7 | ಕನ್ನಡ | K4 |
| 44 | 4/10/2007 | ಗುರುವಾರ | ವಿಶ್ವ ಮತ್ತು ಭೂಮಿ | 8 | ಸಮಾಜ ವಿಜ್ಞಾನ | SS3 |
| 45 | 5/10/2007 | ಶುಕ್ರವಾರ | ವೃತ್ತಗಳು | 7 | ಗಣಿತ | M4 |
| 46 | 8/10/2007 | ಸೋಮವಾರ | ಬೀಜಗಣಿತದ ಮೂಲಕ್ರಿಯೆಗಳು | 6 | ಗಣಿತ | m4 |

ಪುಟ : 19ಕ್ಕೆ...

| | | | | | | |
|---|---|---|---|---|---|---|
| 47 | 9/10/2007 | ಮಂಗಳವಾರ | MY TREE | 7 | ಇಂಗ್ಲೀಷ್ | E3 |
| 48 | 11/10/2007 | ಗುರುವಾರ | ಸರ್ವಜ್ಞನ ಸಲಹೆ | 8 | ಕನ್ನಡ | K3 |
| 49 | 15/10/2007 | ಸೋಮವಾರ | ನಕ್ಷತ್ರ ಪುಂಜಗಳು | 8 | ವಿಜ್ಞಾನ | SC4 |
| 50 | 16/10/2007 | ಮಂಗಳವಾರ | ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ | 8 | ಕನ್ನಡ | K4 |
| 51 | 17/10/2007 | ಬುಧವಾರ | ನಮ್ಮ ಸುತ್ತಮುತ್ತಲಿನ ಬದಲಾವಣೆ | 6 | ವಿಜ್ಞಾನ | SC4 |
| 52 | 19/10/2007 | ಶುಕ್ರವಾರ | ಸ್ಕೌಟ್ಸ್ ಮತ್ತು ಗೈಡ್ಸ್(12 pm) | 6 | ಕನ್ನಡ | K5 |
| 53 | 22/10/2007 | ಸೋಮವಾರ | ಮತಧರ್ಮ ಮತ್ತು ಸಮಾಜ ಸುಧಾರಕರು (12 pm) | 6 | ಸಮಾಜ ವಿಜ್ಞಾನ | SS3 |
| 54 | 23/10/2007 | ಮಂಗಳವಾರ | ಮೇಡಂ ಕಾಮಾ(12pm) | 7 | ಕನ್ನಡ | K5 |
| 55 | 24/10/2007 | ಬುಧವಾರ | ಅನುಪಾತ ಸಮಾನುಪಾತ (12pm) | 7 | ಗಣಿತ | M5 |
| 56 | 25/10/2007 | ಗುರುವಾರ | THE HUNGRY WOLF(12pm) | 7 | ಇಂಗ್ಲೀಷ್ | E4 |
| 57 | 26/10/2007 | ಶುಕ್ರವಾರ | ಉತ್ತರನ ಪೌರುಷ(2.35pm) | 8 | ಕನ್ನಡ | K5 |
| 58 | 29/10/2007 | ಸೋಮವಾರ | SEA FEVER(POEM)(2.35pm) | 8 | ಇಂಗ್ಲೀಷ್ | E3 |
| 59 | 30/10/2007 | ಮಂಗಳವಾರ | ವಸ್ತುಗಳ ಸ್ಥಿತಿ ಬದಲಾವಣೆ (2.35pm) | 8 | ವಿಜ್ಞಾನ | SC5 |
| 60 | 31/10/2007 | ಬುಧವಾರ | ತ್ರಿಭುಜಗಳ ಪ್ರಕಾರ(2.35pm) | 8 | ಗಣಿತ | M4 |
| 61 | 5/11/2007 | ಸೋಮವಾರ | IT TASTES WONDARFULL | 6 | ಇಂಗ್ಲೀಷ್ | E4 |
| 62 | 6/11/2007 | ಮಂಗಳವಾರ | ಚಲನೆ, ಬಲ ಮತ್ತು ಯಂತ್ರ | 6 | ವಿಜ್ಞಾನ | SC5 |
| 63 | 7/11/2007 | ಬುಧವಾರ | ವಿಲೋಮಾನುಪಾತ | 7 | ಗಣಿತ | M6 |
| 64 | 9/11/2007 | ಶುಕ್ರವಾರ | ಗಾನಗಂಧರ್ವ ಪುಟ್ಟರಾಜ ಗವಾಯಿ | 7 | ಕನ್ನಡ | K6 |
| 65 | 12/11/2007 | ಸೋಮವಾರ | ಕರುಣಾಳು ರಾಘವನಲ್ಲಿ ತಪ್ಪಿಲ್ಲ | 8 | ಕನ್ನಡ | K6 |
| 66 | 13/11/2007 | ಮಂಗಳವಾರ | ಬೆಳಕಿನ ವಕ್ರೀಭವನ | 8 | ವಿಜ್ಞಾನ | SC6 |
| 67 | 14/11/2007 | ಬುಧವಾರ | ಗೋವಿನ ಬಾಳು(ಪದ್ಯ) | 6 | ಕನ್ನಡ | K6 |
| 68 | 15/11/2007 | ಗುರುವಾರ | ಅನುಪಾತ ಮತ್ತು ಸಮಾನುಪಾತ | 6 | ಗಣಿತ | M5 |
| 69 | 16/11/2007 | ಶುಕ್ರವಾರ | 18 ನೇ ಶತಮಾನದ ಭಾರತ | 7 | ಸಮಾಜ ವಿಜ್ಞಾನ | SS4 |
| 70 | 19/11/2007 | ಸೋಮವಾರ | ಮೌರ್ಯ ಸಾಮ್ರಾಜ್ಯ ಅಶೋಕ | 8 | ಸಮಾಜ ವಿಜ್ಞಾನ | SS4 |
| 71 | 20/11/2007 | ಮಂಗಳವಾರ | A BRAVE BOY | 6 | ಇಂಗ್ಲೀಷ್ | E5 |
| 72 | 21/11/2007 | ಬುಧವಾರ | ಮಧ್ಯಕಾಲೀನ ಭಕ್ತಿಪಂಥಗಳು | 6 | ಸಮಾಜ ವಿಜ್ಞಾನ | SS4 |
| 73 | 22/11/2007 | ಗುರುವಾರ | OUR FESTIVALS | 7 | ಇಂಗ್ಲೀಷ್ | E5 |
| 74 | 23/11/2007 | ಶುಕ್ರವಾರ | GIRAFFE | 8 | ಇಂಗ್ಲೀಷ್ | E4 |
| 75 | 28/11/2007 | ಬುಧವಾರ | ಲಾಭ–ನಷ್ಟ | 8 | ಗಣಿತ | M5 |
| 76 | 29/11/2007 | ಗುರುವಾರ | ಸೌಜನ್ಯ | 6 | ಕನ್ನಡ | K7 |
| 77 | 30/11/2007 | ಶುಕ್ರವಾರ | ಬೀಜಪದಗಳ ಗುಣಾಕಾರ ಮತ್ತು ಭಾಗಾಕಾರ | 6 | ಗಣಿತ | M6 |
| 78 | 3/12/2007 | ಸೋಮವಾರ | ಆಧುನಿಕ ವಚನಗಳು | 7 | ಕನ್ನಡ | K7 |
| 79 | 4/12/2007 | ಮಂಗಳವಾರ | ಶಾಖ | 7 | ವಿಜ್ಞಾನ | SC5 |
| 80 | 5/12/2007 | ಬುಧವಾರ | ವಾಯುಗೋಳ | 8 | ಸಮಾಜ ವಿಜ್ಞಾನ | SS5 |
| 81 | 6/12/2007 | ಗುರುವಾರ | ರಾಜ್ಯಸರಕಾರ | 6 | ಸಮಾಜ ವಿಜ್ಞಾನ | SS5 |
| 82 | 7/12/2007 | ಶುಕ್ರವಾರ | ಗಣಕಯಂತ್ರ | 6 | ವಿಜ್ಞಾನ | SC6 |
| 83 | 10/12/2007 | ಸೋಮವಾರ | ಹುಗ್ಗಿ–ತುಪ್ಪ | 7 | ಕನ್ನಡ | K8 |
| 84 | 11/12/2007 | ಮಂಗಳವಾರ | VOYAGE ARROUND THE WORLD | 8 | ಇಂಗ್ಲೀಷ್ | E5 |
| 85 | 12/12/2007 | ಬುಧವಾರ | ದ್ಯುತಿಸಂಶ್ಲೇಷಣೆ | 8 | ವಿಜ್ಞಾನ | SC7 |
| 86 | 13/12/2007 | ಗುರುವಾರ | ಸ್ವಾಭಿಮಾನಿ ಅಂಬೇಡ್ಕರ(ಪದ್ಯ) | 6 | ಕನ್ನಡ | K8 |
| 87 | 2/1/2008 | ಬುಧವಾರ | ತ್ರಿಭುಜದ ವಿಸ್ತೀರ್ಣ | 6 | ಗಣಿತ | M7 |
| 88 | 3/1/2008 | ಗುರುವಾರ | ಭಾರತದ ಮೇಲೆ ಆಂಗ್ಲರ ಆಡಳಿತದ ಪ್ರಭಾವ | 7 | ಸಮಾಜ ವಿಜ್ಞಾನ | SS5 |
| 89 | 4/1/2008 | ಶುಕ್ರವಾರ | ಭಿನ್ನರಾಶಿ ದಶಮಾಂಶ ಶೇಕಡಾಮಾನ | 7 | ಗಣಿತ | M7 |
| 90 | 7/1/2008 | ಸೋಮವಾರ | ಸೋಡಿ–ಸೋಡಿದರ | 8 | ಗಣಿತ | M6 |
| 91 | 8/1/2008 | ಮಂಗಳವಾರ | SIR M. VISHVESWARAYYA | 6 | ಇಂಗ್ಲೀಷ್ | E6 |
| 92 | 9/1/2008 | ಬುಧವಾರ | FROGS AT SCHOOL | 7 | ಇಂಗ್ಲೀಷ್ | E6 |
| 93 | 10/1/2008 | ಗುರುವಾರ | ಆಹಾರ ಆರೋಗ್ಯ ರೋಗ | 7 | ವಿಜ್ಞಾನ | SC6 |
| 94 | 11/1/2008 | ಶುಕ್ರವಾರ | ಬೀಜೋಕ್ತಿ ಮ.ಸಾ.ಅ. | 8 | ಗಣಿತ | M7 |
| 95 | 15/1/2008 | ಮಂಗಳವಾರ | ವಚನಗಳು | 8 | ಕನ್ನಡ | K7 |
| 96 | 16/1/2008 | ಬುಧವಾರ | ಜೀವಿಗಳ ಪ್ರಪಂಚ | 6 | ವಿಜ್ಞಾನ | SC7 |

| | | | | | | |
|---|---|---|---|---|---|---|
| 97 | 17/1/2008 | ಗುರುವಾರ | ಗ್ರಾಹಕ ಶಿಕ್ಷಣ | 7 | ಸಮಾಜ ವಿಜ್ಞಾನ | SS6 |
| 98 | 18/1/2008 | ಶುಕ್ರವಾರ | A NIGHT WITH A WOLF | 8 | ಇಂಗ್ಲೀಷ್ | E6 |
| 99 | 21/1/2008 | ಸೋಮವಾರ | ಪೋಷಕಾಂಶಗಳು–ಆಕರ ನ್ಯೂನ್ಯತೆ | 8 | ವಿಜ್ಞಾನ | SC8 |
| 100 | 22/1/2008 | ಮಂಗಳವಾರ | ನಮ್ಮ ರಾಷ್ಟ್ರೀಯ ಚಿಹ್ನೆಗಳು | 6 | ಸಮಾಜ ವಿಜ್ಞಾನ | SS6 |
| 101 | 23/1/2008 | ಬುಧವಾರ | RANI OF JHANSI | 8 | ಇಂಗ್ಲೀಷ್ | E7 |
| 102 | 24/1/2008 | ಗುರುವಾರ | ಮಣ್ಣು | 7 | ವಿಜ್ಞಾನ | SC7 |
| 103 | 25/1/2008 | ಶುಕ್ರವಾರ | ವಿಜಯನಗರ ಸಾಮ್ರಾಜ್ಯ | 6 | ಸಮಾಜ ವಿಜ್ಞಾನ | SS7 |
| 104 | 28/1/2008 | ಸೋಮವಾರ | ಜೀವಿಗಳ ರಚನೆ ಮತ್ತು ಕಾರ್ಯ | 6 | ವಿಜ್ಞಾನ | SC8 |
| 105 | 29/1/2008 | ಮಂಗಳವಾರ | ISWARACHANDRA VIDYA SAGAR | 7 | ಇಂಗ್ಲೀಷ್ | E7 |
| 106 | 30/1/2008 | ಬುಧವಾರ | ಶಬ್ದ | 7 | ವಿಜ್ಞಾನ | SC8 |
| 107 | 31/8/2008 | ಗುರುವಾರ | ವನ್ಯಜೀವಿ ಸಂರಕ್ಷಣೆ | 8 | ವಿಜ್ಞಾನ | SC9 |
| 108 | 1/2/2008 | ಶುಕ್ರವಾರ | OH,NO.! THAT'S TOO MUCH | 6 | ಇಂಗ್ಲೀಷ್ | E7 |
| 109 | 4/2/2008 | ಸೋಮವಾರ | ಗಣಗಳು | 6 | ಗಣಿತ | M8 |
| 110 | 5/2/2008 | ಮಂಗಳವಾರ | ಸರ್ಪಗಂಧಿ | 7 | ಕನ್ನಡ | K8 |
| 111 | 6/2/2008 | ಬುಧವಾರ | ಹೃದಯ ತಂಪಾಯ್ತು | 8 | ಕನ್ನಡ | K8 |
| 112 | 7/2/2008 | ಗುರುವಾರ | ದಲ್ಲಾಳಿ (ಕಮೀಷನ) | 8 | ಗಣಿತ | M8 |
| 113 | 8/2/2008 | ಶುಕ್ರವಾರ | ತ್ರಿಪದಿಗಳು(ಪದ್ಯ) | 6 | ಕನ್ನಡ | K9 |
| 114 | 11/2/2008 | ಸೋಮವಾರ | ಜೀವಿಗಳ ರಚನೆ ಮತ್ತು ಕಾರ್ಯ | 6 | ವಿಜ್ಞಾನ | SC9 |
| 115 | 12/2/2008 | ಮಂಗಳವಾರ | ಭಾರತದ ಮೊದಲ ಸ್ವಾತಂತ್ರ್ಯ ಸಮರ | 7 | ಸಮಾಜ ವಿಜ್ಞಾನ | SS7 |
| 116 | 13/2/2008 | ಬುಧವಾರ | ಸೋಡಿ ದಲ್ಲಾಳಿ | 7 | ಗಣಿತ | M8 |
| 117 | 14/2/2008 | ಗುರುವಾರ | ಹರ್ಷವರ್ಧನ | 8 | ಸಮಾಜ ವಿಜ್ಞಾನ | SS6 |
| 118 | 15/2/2008 | ಶುಕ್ರವಾರ | ಕನ್ನಡಿಗರಿಗೆ ಟಿಪ್ಪುವಿನ ಪತ್ರ | 6 | ಕನ್ನಡ | K10 |
| 119 | 18/2/2008 | ಸೋಮವಾರ | ಸರಳಸಮೀಕರಣಗಳು | 6 | ಗಣಿತ | M9 |
| 120 | 19/2/2008 | ಮಂಗಳವಾರ | ಪುಷ್ಪರಗಳೆ | 7 | ಕನ್ನಡ | K10 |
| 121 | 20/2/2008 | ಬುಧವಾರ | JOSEPH LISTER | 8 | ಇಂಗ್ಲೀಷ್ | E8 |
| 122 | 21/2/2008 | ಗುರುವಾರ | ನೈಜೀರಿಯಾ, ಈಜಿಪ್ಟ, ದಕ್ಷಿಣ ಆಫ್ರಿಕಾ ರಿಪಬ್ಲಿಕ್ | 6 | ಸಮಾಜ ವಿಜ್ಞಾನ | SS8 |
| 123 | 22/2/2008 | ಶುಕ್ರವಾರ | ನೀರು | 6 | ವಿಜ್ಞಾನ | SC10 |
| 124 | 25/2/2008 | ಸೋಮವಾರ | THE MOUNTAIN AND SQUIRREL | 7 | ಇಂಗ್ಲೀಷ್ | E8 |
| 125 | 26/2/2008 | ಮಂಗಳವಾರ | ಸರಳ ಸಮೀಕರಣ | 7 | ಗಣಿತ | M9 |
| 126 | 27/2/2007 | ಬುಧವಾರ | ನೀರಿನ ಪ್ರಾಮುಖ್ಯತೆ | 8 | ವಿಜ್ಞಾನ | SC10 |
| 127 | 28/2/2008 | ಗುರುವಾರ | RAIN DROPS | 6 | ಇಂಗ್ಲೀಷ್ | E8 |
| 128 | 29/2/2008 | ಶುಕ್ರವಾರ | ಪ್ರಕೃತಿಯಲ್ಲಿ ಸಮತೋಲನ | 6 | ವಿಜ್ಞಾನ | SC11 |
| 129 | 3/3/2008 | ಸೋಮವಾರ | ಮಾನವ ಹಕ್ಕುಗಳು | 7 | ಸಮಾಜ ವಿಜ್ಞಾನ | SS8 |
| 130 | 4/3/2008 | ಮಂಗಳವಾರ | ಗಂಗೆಯಲ್ಲಿ ದೀಪಮಾಲೆ | 8 | ಕನ್ನಡ | K9 |
| 131 | 5/3/2008 | ಬುಧವಾರ | ಬ್ಯಾಂಕ್ ನಿರ್ವಹಣೆ | 8 | ಗಣಿತ | M12 |
| 132 | 6/3/2008 | ಗುರುವಾರ | ದಕ್ಷಿಣ ಅಮೇರಿಕಾ | 6 | ಸಮಾಜ ವಿಜ್ಞಾನ | SS9 |
| 133 | 7/3/2008 | ಶುಕ್ರವಾರ | ಚತುರ್ಭುಜಗಳ ಲಕ್ಷಣಗಳು | 6 | ಗಣಿತ | M10 |

**ಇಲ್ಲಿಂದ 12.00 ರಿಂದ 12.30 ರವರೆಗೆ ಪ್ರಸಾರ**

| | | | | | | |
|---|---|---|---|---|---|---|
| 134 | 10/3/2008 | ಸೋಮವಾರ | ಆಮ್ಲ ಪ್ರತ್ಯಾಮ್ಲ ಲವಣ | 7 | ವಿಜ್ಞಾನ | SC9 |
| 135 | 11/3/2008 | ಮಂಗಳವಾರ | RIKSHA BILLA | 8 | ಇಂಗ್ಲೀಷ್ | E9 |
| 136 | 11/3/2008 | ಮಂಗಳವಾರ | ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಕೊಡುಗೆ | 8 | ಸಮಾಜ ವಿಜ್ಞಾನ | SS7 |
| 137 | 12/3/2008 | ಬುಧವಾರ | THE SICK LION | 6 | ಇಂಗ್ಲೀಷ್ | E9 |
| 138 | 12/3/2008 | ಬುಧವಾರ | THE PIED PIPER | 7 | ಇಂಗ್ಲೀಷ್ | E9 |
| 139 | 13/3/2008 | ಗುರುವಾರ | ದೂರಸಂಪರ್ಕ ವ್ಯವಸ್ಥೆ | 7 | ವಿಜ್ಞಾನ | SC10 |
| 140 | 13/3/2008 | ಗುರುವಾರ | ಕಂಬಳ | 8 | ಕನ್ನಡ | K10 |
| 141 | 14/3/2008 | ಶುಕ್ರವಾರ | ತ್ರಿಭುಜಗಳ ಸರ್ವಸಮತೆ | 8 | ಗಣಿತ | M10 |
| 142 | 14/3/2008 | ಶುಕ್ರವಾರ | THE SPELLING GAME | 6 | ಇಂಗ್ಲೀಷ್ | E10 |
| 143 | | | EVERY THINGS RUNS ON THE WHEEL | 8 | ಇಂಗ್ಲೀಷ್ | ಇ10 |

| | | | | |
|---|---|---|---|---|
| 144 | ಗ್ರಾಮಪಂಚಾಯತಿ ಚುನಾವಣೆ | 8 | ಸಮಾಜ ವಿಜ್ಞಾನ | SS8 |
| 145 | ರಾಷ್ಟ್ರೀಯ ಚಳುವಳಿ | 7 | ಸಮಾಜ ವಿಜ್ಞಾನ | SS9 |
| 146 | ಕೃಷಿ ಪದ್ಧತಿ | 7 | ವಿಜ್ಞಾನ | SC11 |
| 147 | WHAT'S GOOD | 7 | ಇಂಗ್ಲೀಷ್ | E10 |
| 148 | ನೈಸರ್ಗಿಕ ಸಂಪನ್ಮೂಲ | 8 | ಸಮಾಜ ವಿಜ್ಞಾನ | SS9 |
| 149 | ಮರು ಚಕ್ರೀಕರಣ | 8 | ವಿಜ್ಞಾನ | SC11 |
| 150 | ತ್ರಿಕೋನದ ರಚನೆ | 7 | ಗಣಿತ | M10 |

ಒಟ್ಟು ಪಾಠಗಳು – 142. 7,8 ನೇ ತರಗತಿಗೆ ತಲಾ 46 ಪಾಠಗಳು ಪ್ರಸಾರವಾಗುವುವು. 6ನೇ ತರಗತಿಗೆ 50 ಪಾಠಗಳು ಪ್ರಸಾರವಾಗುವುವು. ದಿ: 9–7–2007 ರಿಂದ ದಿ: 13–12–2007 ರ ಅವಧಿ ಹಾಗೂ ದಿ: 2–1–2008 ರಿಂದ ದಿ:10–3–2008 ರವರೆಗೆ ಬಾನುಲಿಪಾಠ ಮಧ್ಯಾಹ್ನ 11.30 ರಿಂದ 12.00 ರ ಅವಧಿಯಲ್ಲಿ ಪ್ರಸಾರವಾಗುವುದು ಹಾಗೂ 11–3–2008 ರಿಂದ 14–3–2008 ರವರೆಗೆ ಮಧ್ಯಾಹ್ನ 11.30 ರಿಂದ 12.00 ಮತ್ತು 12.00 ರಿಂದ 12.30ರ ವರೆಗೆ ಪ್ರಸಾರವಾಗುವುದು. ಉದ್ಘಾಟನೆ– ದಿ: 09–07–2007 ರಂದು ಸೋಮವಾರ ಬೆಳಿಗ್ಗೆ 11.00 ರಿಂದ 11.30

## ಶಿಕ್ಷಕರ ನೇಮಕಾತಿ .....

...ಪುಟ : 6 ರಿಂದ



* ಸಮಾಜದ ಪ್ರತಿಬಿಂಬವೇ ಶಾಲೆ ಎನ್ನುತ್ತಾರೆ. ಸಮಾಜವು ಆರೋಗ್ಯವಾಗಿರಬೇಕಾದರೆ ಶಾಲೆಯಲ್ಲಿ ಬೆಳೆಯುವ, ಕಲಿಯುವ ಮಕ್ಕಳಿಗೆ ಆರೋಗ್ಯಕರ, ಸ್ವಾಸ್ಥ್ಯ ಸಮಾಜದ ಪರಿಕಲ್ಪನೆಯನ್ನು ಪ್ರಾಥಮಿಕ ಶಾಲಾ ಹಂತದಲ್ಲಿಯೇ ನೀಡಿದರೆ ಮಾತ್ರ ಸಾಧ್ಯ. ಅಂತಹ ಶಾಲೆಗಳಲಿ ಪ್ರತಿಭಾವಂತ, ಪ್ರಭಾವಿ, ಅರ್ಹ ಶಿಕ್ಷಕರ ನೇಮಕಾತಿಯು ಅಗತ್ಯವಾಗಿರುತ್ತದೆ. ಈಗ ಸಿ.ಇ.ಟಿ. ಯು ಉತ್ತಮ ಶಿಕ್ಷಕರ ನೇಮಕಾತಿ ಮಾಡುತ್ತಾ ಉತ್ತಮ ಸಮಾಜ ನಿರ್ಮಿಸುವಲ್ಲಿ ಶ್ರಮಿಸುತ್ತಿರುವುದು ಸ್ವಾಗತಾರ್ಹ.

**– ನಾನಾಗೌಡ ಪಾಟೀಲ**



* ಯಥಾ ರಾಜಾ ತಥಾ ಪ್ರಜಾ, ಅನ್ನುವಂತೆ; ಮಾಸ್ತಾರ್ ಇದ್ದಂಗ ಮಕ್ಕಳು. ಶಿಕ್ಷಕರು ಅರ್ಹ, ಪ್ರತಿಭೆ, ಕ್ರಿಯಾಶೀಲರಾಗಿದ್ದರೆ ಮಾತ್ರ ಉತ್ತಮ ಗುಣಮಟ್ಟದ ಮಕ್ಕಳನ್ನು ತಯಾರಿಸಬಲ್ಲರು. ಆದ್ದರಿಂದ ಈಗ ಉತ್ತಮ ಶಿಕ್ಷಕರ ನೇಮಕಾತಿ ಬೇಕಾಗಿತ್ತು. ಆ ಕ್ರಮವನ್ನು ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯು ಸಿ.ಇ.ಟಿ.ಯ ಮುಖಾಂತರ ಮಾಡಿಸುತ್ತಿದ್ದುದು ಪ್ರಶಂಸಾರ್ಹವಾಗಿದೆ. ಇದೇ ಪದ್ಧತಿಯು ಮುಂದುವರೆಯಲಿ.

**– ಜಯಶ್ರೀ ಹೊಸಕೇರಿ**



* ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ವಾಣಿಯಂತೆ ಗುರುವು ಉತ್ತಮನಾಗಿದ್ದರೆ ಮಾತ್ರ ಉತ್ತಮ ಶಿಷ್ಯನು (ಪರಮಹಂಸರು – ಸ್ವಾಮಿ ವಿವೇಕಾನಂದರು) ತಯಾರಾಗಬಲ್ಲನು. ಉತ್ತಮ ಶಿಕ್ಷಕರನ್ನು ನೀಡುವ ಒಂದು ಸರ್ವೋತ್ತಮ ಕಾರ್ಯವು ಸಿ.ಇ.ಟಿ. ಮೂಲಕ ಮಾಡುವ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಿಂದ ಸಾಧ್ಯವಾಗಿದೆ. ಇದರಿಂದ ಅರ್ಹ ಅಭ್ಯರ್ಥಿಗಳು ಮಾತ್ರ ಶಿಕ್ಷಕರಾಗಿ ಬರಲು ಸಾಧ್ಯವಾಗುತ್ತಿದೆ. ಇದೇ ಕ್ರಮವು ಮುಂದುವರೆಯಲಿ.

**– ಯಲ್ಲಪ್ಪ ಆಸುಂಡಿ.**



* ಒಂದು ಉತ್ತಮ ಸಮಾಜದ ನಿರ್ಮಾಣ ಹಾಗೂ ಒಂದು ರಾಷ್ಟ್ರದ ಪ್ರಗತಿಯನು ಅಳೆಯಲು ಆ ದೇಶದ ಶೈಕ್ಷಣಿಕ ಪ್ರಗತಿಯನ್ನು ಹಾಗೂ ಶಿಕ್ಷಣ ನೀಡುವ ಕ್ರಮವನ್ನು ಅಳತೆಗೋಲಾಗಿ ತೆಗೆದುಕೊಳ್ಳಲಾಗುತ್ತಿದೆ. ಉತ್ತಮ ಕಾರ್ಯಕ್ಷಮತೆ ಇರುವ ಹಾಗೂ ಅರ್ಹ ಶಿಕ್ಷಕರ ನೇಮಕಾತಿಯೂ ಒಂದು. ಉತ್ತಮ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಶ್ರೇಷ್ಠ ಕ್ರಮವು ಸಿ.ಇ.ಟಿ. ಮೂಲಕ ಮಾಡಲಾಗುತ್ತಿದೆ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಲಾಭವಾಗುತ್ತದೆ. ಇಂತಹ ಕ್ರಮವನ್ನು ಜಾರಿಗೆ ತಂದಿರುವ ಸರಕಾರ ಹಾಗೂ ಶಿಕ್ಷಣ ಇಲಾಖೆಗೆ ನಾನು ಚಿರಋಣಿ.

**– ಯಲ್ಲಮ್ಮ ರಂಗಣ್ಣವರ**

ಸಂಗ್ರಹ ಹಾಗೂ ಮಾರ್ಗದರ್ಶನ
**ಎನ್. ಎಚ್. ನಾಗೂರ, ಬಾಗಲಕೋಟೆ**

## ಆರೋಗ್ಯವೇ ಭಾಗ್ಯ

ಶಿಕ್ಷಣ ತಜ್ಞ "ಬೇಕನ್" ಹೇಳಿರುವಂತೆ "ಆರೋಗ್ಯವಂತನ ದೇಹ ಆತ್ಮನ ಅರಮನೆ, ಅನಾರೋಗ್ಯವಂತನ ದೇಹ ಆತ್ಮನ ಸೆರೆಮನೆ" ಇದ್ದಂತೆ. ಈ ನಮ್ಮ ದೇಹವು ಹಲವಾರು ಜೀವಕೋಶಗಳಿಂದ ಕೂಡಿದೆ. ನಮ್ಮ ದೇಹದಲ್ಲಿನ 'ಎ.ಟಿ.ಪಿ.' (ಅಡಿನೋಸಿನ್ ಟ್ರೈಪಾಸ್ಪೆಟ್) ಇದು ಹೃದಯಬಡಿಯಲು ಹಾಗೂ ನಾಡಿ ಬಡಿಯಲು ಅವಕಾಶ ಮಾಡಿಕೊಡುತ್ತದೆ. ಡಿ.ಎನ್.ಎ.(ಡಿ ಆಕ್ಸಿರೈಬೋ ನ್ಯೂಕ್ಲಿಕ್ ಆಸಿಡ್) ಇವು ಪ್ರೋಟೀನ್‌ಗಳನ್ನು ತಯಾರು ಮಾಡುತ್ತವೆ. ಹಾಗೂ ಆರ್.ಎನ್.ಎ. (ರೈಬೋನ್ಯೂಕ್ಲಿಕ್ ಅಸಿಡ್)ಗಳು ಪ್ರೋಟೀನ್ಸ್ ಮತ್ತು ರೋಗನಿರೋಧಕ ಕಣಗಳನ್ನು ಕೂಡ ಸೃಷ್ಟಿಸುತ್ತವೆ.

"Health is Wealth" ಆರೋಗ್ಯವೇ ಭಾಗ್ಯ ಎಂಬಮಾತು ಸತ್ಯವಾದುದು."Prevention is Better Than Cure" ಎಂಬಂತೆ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಅಗತ್ಯವಾಗಿದೆ. ಪ್ರತಿದಿನ ಒಂದು ಸೇಬು ತಿಂದರೆ ವೈದ್ಯರನ್ನು ದೂರವಿರಿಸಬಹುದು ಎಂಬ ಅಭಿಪ್ರಾಯವಿದೆ.

"ಆರೋಗ್ಯ ಚೆನ್ನಾಗಿದ್ದರೆ ಮನಸ್ಸು ಕೂಡಾ ಚೆನ್ನಾಗಿರುತ್ತದೆ.

"Strength is life" "Weakness is death" ಎಂದು ಹೇಳಿರುವುದನ್ನು ಕೇಳಿದ್ದೇವೆ. ನಮ್ಮ ಆರೋಗ್ಯ ಚೆನ್ನಾಗಿರಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕು. ಅವು ಯಾವುವೆಂದರೆ ಆಹಾರ, ವಿಶ್ರಾಂತಿ, ವ್ಯಾಯಾಮ, ವೈಯಕ್ತಿಕ ಸ್ವಚ್ಛತೆ ಮತ್ತು ಸಾಮಾನ್ಯ ತಿಳುವಳಿಕೆ. ಇವುಗಳ ಬಗ್ಗೆ ಗಮನ ಕೊಟ್ಟರೆ ಆರೋಗ್ಯ ಕಾಪಾಡಿಕೊಳ್ಳಬಹುದು.

ಆರೋಗ್ಯ ಅಭ್ಯಾಸದಲ್ಲಿ ಮೊದಲು ಆಹಾರದ ಬಗೆ ಹೇಳುವುದಾದರೆ ಕಾರ್ಬೋಹೈಡ್ರೇಟ್ಸ್, ಪ್ರೋಟೀನ್ಸ್, ಮೇದಸ್ಸು, ವಿಟಮಿನ್‌ಗಳು ಮುಖ್ಯ. ಕಾಳು, ಹಣ್ಣುಗಳು, ತರಕಾರಿ, ಹಾಲು ಮುಂತಾದವುಗಳಿಂದ ಕಾರ್ಬೋಹೈಡ್ರೇಟ್ಸ್ ದೊರಕುತ್ತದೆ. ಮಾಂಸ, ಹಾಲು, ಮೀನು, ಮೊಟ್ಟೆ, ಇವುಗಳಿಂದ ಮೇದಸ್ಸು, ಎಣ್ಣೆ ಬೀಜಗಳಿಂದ ಕೊಬ್ಬು ಮತ್ತು ಎ.ಬಿ.ಸಿ.ಡಿ ಮತ್ತು ಹೆಚ್ ವಿಟಮಿನ್‌ಗಳು ಕಬ್ಬಿಣದ ಅಂಶಗಳು ದೊರಕುತ್ತದೆ.

ಇನ್ನು ವಿಶ್ರಾಂತಿಯ ಬಗ್ಗೆ ಹೇಳುವುದಾದರೆ "Rest while after Dinner, Walk a mile after Supper" ಎಂಬ ಮಾತಿದೆ. ಆದುದರಿಂದ ಊಟದ ಜೊತೆಗೆ ವಿಶ್ರಾಂತಿ ಮುಖ್ಯ. ಪ್ರತಿಯೊಬ್ಬರು ದಿನಕ್ಕೆ 8 ರಿಂದ 10 ತಾಸು ನಿದ್ದೆ ಮಾಡಬೇಕು. "Early to bed, early to raise makes the man health and wise".

ಪ್ರತಿ ದಿನ 20 ರಿಂದ 25 ನಿಮಿಷ ವ್ಯಾಯಾಮ ಮಾಡಿದರೆ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ವ್ಯಾಯಾಮವು ಶರೀರದ ವೃದ್ಧಿಗೆ ಮುಖ್ಯ. ಕೊಬ್ಬು ಕರಗಲು, ಆರೋಗ್ಯಕರ ಜೀವನ ನಡೆಸಲು ವ್ಯಾಯಾಮ ಮುಖ್ಯ. ರಕ್ತ ಪರಿಚಲನೆಗೆ, ನರಗಳ ವೃದ್ಧಿಗೆ ಶಾಶ್ವತ ಶಕ್ತಿಗೆ, ಗ್ರಹಣ ಶಕ್ತಿಗೆ ವ್ಯಾಯಾಮ ಅಗತ್ಯವಾಗಿ ಬೇಕೇಬೇಕು.

ವೈಯಕ್ತಿಕ ಸ್ವಚ್ಛತೆ ಬಗ್ಗೆ ಎಚ್ಚರ ವಹಿಸಬೇಕು. ಸ್ನಾನ, ಹಲ್ಲು, ಬಾಯಿ, ಕೂದಲು, ಉಗುರು, ಬಟ್ಟೆ ಇವುಗಳ ಬಗ್ಗೆ ಸ್ವಚ್ಛತೆ ಇರಬೇಕು.

ವಾತಾವರಣಕ್ಕೆ ತಕ್ಕಂತೆ ಉಡುಪು ಧರಿಸುವುದು, ಕೈಗಳನ್ನು ಚೆನ್ನಾಗಿ ತೊಳೆದ ನಂತರ ಊಟ ಮಾಡುವುದು. ಬಿಸಿನೀರಿನ ಬಳಕೆ, ಆಟವಾಡಿದ ನಂತರ ಕೈಕಾಲು ಮುಖ ತೊಳೆದುಕೊಳ್ಳುವುದು. ಈ ರೀತಿ ಆರೋಗ್ಯದ ನಿಯಮ ಅನುಸರಿಸುವುದು ಒಳ್ಳೆಯದು.

ಮಕ್ಕಳಿಗೆ ಇಂತಹ ಆರೋಗ್ಯದ ಶಿಕ್ಷಣ ನೀಡಿದಾಗಲೇ ವಿದ್ಯಾರ್ಥಿಗಳ ಶರೀರ ಮತ್ತು ಮನಸ್ಸು ಕೂಡ ಆರೋಗ್ಯವಾಗಿರಲು ಸಾಧ್ಯ. ಇತ್ತ ಎಲ್ಲರೂ ಆಲೋಚಿಸಿದಾಗ ಆರೋಗ್ಯ ಕಾಪಾಡುವುದು ಸುಲಭ ಅಲ್ಲವೆ ?

"ಅರ್ಥರೇಖೆ ಇದ್ದರೇನು, ಆರೋಗ್ಯವಿಲ್ಲದನ್ನಕ್ಕ" ಎಂಬ ಬಸವಣ್ಣನವರ ವಚನವನ್ನು ಕೇಳಿದ್ದೇವೆ. ಈ ವಾಕ್ಯ ಓದಿದಾಗ ಎಷ್ಟು ಹಣವಿದ್ದರೇನು ಆರೋಗ್ಯವಿಲ್ಲದಿದ್ದರೆ ಎಂದು ತಿಳಿಯುತ್ತದೆ. ನಮ್ಮ ಜೀವನ ಸುಖ ಸಂತೋಷದಿಂದ ಸಾಗಬೇಕಾದರೆ ಆರೋಗ್ಯ ಬಹು ಮುಖ್ಯ.

**–ಎ. ಮೃತ್ಯುಂಜಯ, ಮು.ಶಿ.**
ಸ.ಪ್ರಾ. ವಿಠಲಾಪುರ
ಕೃ.ರಾ. ಪೇಟೆ ತಾ॥

## ನಮ್ಮೂರ ಶಾಲೆ

ಏನು ಸುಂದರವಿಹುದು ನಮ್ಮೂರ ಈ ಶಾಲೆ
ಪ್ರಕೃತಿ ಮಾತೆಗೆ ಶೋಭೆ ತರುವ ಈ ಶಾಲೆ

ಹಿಂದಿನಂತಲ್ಲ ಬಹುವಿಧದ ಕಲಿಕೆಯ ಶಾಲೆ
ಹಸಿದ ಕಂದಮ್ಮನ ತೃಷೆ ನೀಗಿದಾ ಶಾಲೆ
ಹಲವು ಕವಿಗಳು ಕಲಿತ ಕಮನೀಯ ಈ ಶಾಲೆ
ಜಾತಿ ಭೇದವು ಇಲ್ಲ ನೀತಿ ನಿಯಮದ ಶಾಲೆ

ಅಂಧಕಾರವ ತೊಲಗಿ ಬೆಳಕು ನೀಡುವ ಶಾಲೆ
ಆಧುನಿಕ ಬದುಕು ಬಂಗಾರವಾಗುವ ಶಾಲೆ
ಅರಿವು ಹೀನರಿಗೆ ಅರಿವು ಬಿತ್ತರಿಸುವಾ ಶಾಲೆ
ಕಲೆಗೆ ಮೆರುಗನು ಈ ಭವಿಷ್ಯತ್ತಿನಾ ಶಾಲೆ

ಶಿಕ್ಷಣದ ಚಾರಿತ್ರ್ಯ ತಿಳಿದು ಹೇಳುವ ಶಾಲೆ
ಕ್ರಿಯಾಶೀಲರಿಗೆ ಜಯವ ತಂದಿತ್ತ ನಿಧಿ ಶಾಲೆ
ಗುರುಕುಲಕೆ ಸ್ಫೂರ್ತಿಯನು ತಂದಿತ್ತವರ ಶಾಲೆ
ವಾಗ್ದೇವಿ ವರವ ಕರುಣಿಸುವ ನಮ್ಮೀ ಶಾಲೆ.

ಮುಗ್ಧ ಮಗುವಿನ ಮನಕೆ ಮುದವನೀಯುವ ಶಾಲೆ
ಮನದಂತರಾಳದ ಪ್ರತಿಭೆ ಹೊರಗೆಡಹುವಾ ಶಾಲೆ
ನಾಡಿನಾ ಬದುಕಿಗೆ ಬೆಳಕ ನೀಡಿದ ಶಾಲೆ
ನಾಡ ಜನ ಸಂಪೂರ್ಣ ಸಾಕ್ಷರರಾಗುವ ಶಾಲೆ.

**ಜಯರಾಮ ಜೋಗಿ, ಸ.ಶಿ.**
ಸುದರ್ಶನ ಹಿ.ಪ್ರಾ. ಶಾಲೆ ನಂಚಾರು, ಉಡುಪಿ ಜಿಲ್ಲೆ



# ಇಂಟೆಲ್ ಟೀಚ್ ಪ್ರೋಗ್ರಾಮ್, ಕರ್ನಾಟಕ

ಕರ್ನಾಟಕ, ಅದರಲ್ಲೂ ಬೆಂಗಳೂರು, ಸಾಕ್ಷರತೆ ಮತ್ತು ಶಿಕ್ಷಣದ ಅಭಿವೃದ್ಧಿಯಲ್ಲಿ ದೇಶದ ಇತರ ಎಲ್ಲಾ ರಾಜ್ಯಗಳಿಗೆ ಮಾದರಿಯಾಗಿದೆ. ಕರ್ನಾಟಕದಲ್ಲಿ ಹಲವಾರು ಅತ್ಯುತ್ತಮ ಶೈಕ್ಷಣಿಕ ಸಂಸ್ಥೆಗಳಿದ್ದು, ಅವುಗಳಲ್ಲಿ ಹೆಚ್ಚಿನ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮನ್ನಣೆಗಳಿಸಿದೆ, ಜೊತೆಗೆ ದೇಶ ವಿದೇಶಗಳ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಕೇಂದ್ರವಾಗಿ ಹೆಸರುಗಳಿಸಿದೆ.

ಇಂಟೆಲ್ ಎಜುಕೇಷನ್ ಪ್ರೋಗ್ರಾಮ್ ಮತ್ತು ಕೇಂದ್ರ ಹಾಗು ರಾಜ್ಯ ಸರ್ಕಾರದ ಸಹಕಾರದಿಂದ ಬೆಂಗಳೂರು ಶೇಕಡ 84%ರಷ್ಟು ಸಾಕ್ಷರತೆ ಸಾಧಿಸಿ, 21ನೇ ಶತಮಾನದ ಕೌಶಲ್ಯಗಳನ್ನು ಗಳಿಸುವತ್ತ ದಾಪುಗಾಲು ಹಾಕಿದೆ. ಇದರಿಂದ ಕರ್ನಾಟಕದ ಈ ಸಾಧನೆ ಹಾಗೂ ಅಭಿವೃದ್ಧಿಯನ್ನು ದೇಶದ ಇತರ ರಾಜ್ಯಗಳು ಅನುಸರಿಸುವತ್ತ ಹೆಜ್ಜೆಯಿಟ್ಟಿವೆ.

ಇಂಟೆಲ್ ಎಜುಕೇಷನ್ ಪ್ರೋಗ್ರಾಮ್‌ನ ಭಾಗವಾದ ಇಂಟೆಲ್ ಟೀಚ್, ಶಿಕ್ಷಣದ ಎಲ್ಲಾ ಹಂತಗಳಲ್ಲೂ ತಂತ್ರಜ್ಞಾನ ಆಧಾರಿತ ಬೋಧನಾ ಹಾಗು ಕಲಿಕಾ ವಿಧಾನಗಳನ್ನು ಉತ್ತಮಪಡಿಸುವಲ್ಲಿ ಒಂದು ಪ್ರಮುಖ ಸಾಧನವಾಗಿದೆ.2001ನೇ ಇಸವಿಯ ಮಧ್ಯ ಭಾಗದಲ್ಲಿ ಪ್ರಾರಂಭವಾದಗಿನಿಂದ ಕರ್ನಾಟಕ ಸರ್ಕಾರ, ಡಿ.ಎಸ್.ಇ.ಆರ್.ಟಿ.ಯ ಸಹಯೋಗದೊಂದಿಗೆ ಇಂಟೆಲ್ ಎಜುಕೇಷನ್ ಯೋಜನೆಯೂ ಇಂದಿನವರೆಗೆ ಅತ್ಯಂತ ಫಲಪ್ರಧವಾಗಿ ಸಾಗುತ್ತ ಬಂದಿದೆ. ಕರ್ನಾಟಕ ಸರ್ಕಾರದ ಶಾಲೆಗಳ , ಶಿಕ್ಷಣದಲ್ಲಿ ಐಸಿಟಿ ಅಳವಡಿಕೆಯಲ್ಲಿ ಇಂಟೆಲ್ ಮಾಡಿರುವ ಕೆಲಸದ ವಿವರಗಳನ್ನ ಈ ಕೆಳಕಂಡಂತೆ ನೀಡಲಾಗಿದೆ.

*** ಶಿಕ್ಷಕರ ಅಭಿವೃದ್ಧಿ ಯೋಜನೆ**: ದಿನನಿತ್ಯದಲ್ಲಿ ಬೋಧನಾ–ಕಲಿಕೆ ಪ್ರಕ್ರಿಯೆಯಲ್ಲಿ, ಪರಿಣಾಮಕಾರಿಯಾಗಿ ತಂತ್ರಜ್ಞಾನ ಅಳವಡಿಕೆಯ ಬಗ್ಗೆ ತರಬೇತಿ.

1210 ಶಾಲೆಗಳು

1726 ಮಾಸ್ಟರ್ ಟ್ರೈನರ್ಸ್ : 16305 ಶಿಕ್ಷಕರು ಮಾಸ್ಟರ್ ಟ್ರೈನರ್ಸ್‌ನಿಂದ ತರಬೇತಿ ಪಡೆದಿದ್ದಾರೆ.

ಒಟ್ಟು 18031 ಶಿಕ್ಷಕರು ಕರ್ನಾಟಕದಲ್ಲಿ ತರಬೇತಿ ಪಡೆದಿದ್ದಾರೆ.

*** ಡಯಟ್ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮಗಳು:**

32 ಶಿಕ್ಷಕರಿಗೆ ತರಬೇತಿ, 18 ಡಯಟ್‌ಗಳಿಂದ

256 ಶಿಕ್ಷಕರು ಮಾಸ್ಟರ್ ಟ್ರೈನರ್ಸ್‌ನಿಂದ ತರಬೇತಿ ಪಡೆದಿದ್ದಾರೆ, ವಾರ್ಷಿಕವಾಗಿ 2000 ವಿದ್ಯಾರ್ಥಿಗಳು ಪ್ರಭಾವಿತ.

*** ಶಿಕ್ಷಣದಲ್ಲಿ ಐಸಿಟಿ ಅಳವಡಿಕೆಗೆ ಪ್ರೋತ್ಸಾಹ :** 460 ಮಾಸ್ಟರ್ ಟ್ರೈನರ್ಸ್‌ಗೆ ಪುನಶ್ಚೇತನ ತರಬೇತಿ ಹಾಗೂ ತಂತ್ರಜ್ಞಾನ ಕಾರ್ಯಗಾರವನ್ನು ಐಸಿಟಿ ಅಳವಡಿಕೆಗಾಗಿ ನೀಡಲಾಗಿದೆ.

ಶಿಕ್ಷಕರು ಐಸಿಟಿ ಅಳವಡಿಕೆಗೆ ನೆರವಾಗಲು ಡಿ.ಎಸ್.ಇ.ಆರ್.ಟಿ ಮತ್ತು ಇಂಟೆಲ್ ಜಂಟಿಯಾಗಿ ಯೋಜನಾ ಆಧಾರಿತ ಕಲಿಕಾ ಕೈಪಿಡಿಯನ್ನು ಹೊರತರಲಾಯಿತು.

ಐಸಿಟಿ ಮತ್ತು ಯೋಜನಾ ಆಧಾರಿತ ಕಲಿಕೆ ಅಳವಡಿಕೆಗೆ 1000ಕ್ಕೂ ಹೆಚ್ಚಿನ ಶಾಲೆಗಳೊಂದಿಗೆ ವರುಷಕ್ಕೊಮ್ಮೆ ವಿಡಿಯೋ ಸಂವಾದ.

* ರಾಜ್ಯ ಸರ್ಕಾರದ ಇ–ಆಡಳಿತದ ಘಟಕಕ್ಕೆ ಶಿಕ್ಷಣದಲ್ಲಿ ಐಸಿಟಿ ಕುರಿತು ಶಿಕ್ಷಣ ನೀತಿ ಅಭಿವೃದ್ಧಿ.

*** ಶಿಕ್ಷಕರು ಹಾಗೂ ಶಾಲೆಗಳಿಗೆ ಸ್ಪರ್ಧೆ :**

ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಕೆಯನ್ನು ಪ್ರೋತ್ಸಾಹಿಸಲು, ಡಿ.ಎಸ್.ಇ.ಆರ್.ಟಿ & ಇಂಟೆಲ್ ಜಂಟಿಯಾಗಿ 2003ರಲ್ಲಿ ಶಿಕ್ಷಣದಲ್ಲಿ ತಂತ್ರಜ್ಞಾನ ಪ್ರಶಸ್ತಿ ಸ್ಪರ್ಧೆಯನ್ನು ಪ್ರಾರಂಭಿಸಲಾಯಿತು. ಆರಂಭದಲ್ಲಿ 6 ಶಿಕ್ಷಕರು ಮತ್ತು 3 ಶಾಲೆಗಳಿಗೆ ನಗದು ಬಹುಮಾನದೊಂದಿಗೆ ಗೌರವಿಸಲಾಯಿತು.

2004ರಲ್ಲಿ 500ಕ್ಕೂ ಹೆಚ್ಚು ಪ್ರವೇಶಗಳನ್ನು ಸ್ವೀಕರಿಸಲಾಯಿತು. ಪ್ರಶಸ್ತಿ ವಿತರಣೆ ಸಮಾರಂಭವು ಸೇ 24, 2005ರಂದು ನಡೆಯಿತು. ಪ್ರಶಸ್ತಿಗಳನ್ನು ದ್ವಿಗುಣಗೊಳಿಸಲಾಯಿತು. 14 ಶಿಕ್ಷಕರು, 7 ಶಾಲೆಗಳು ಮತ್ತು 14 ವಿದ್ಯಾರ್ಥಿಗುಂಪುಗಳಿಗೆ, ಅವರ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಗೌರವಿಸಲಾಯಿತು.

2005ರಲ್ಲಿ 500ಕ್ಕೂ ಹೆಚ್ಚು ಪ್ರವೇಶಗಳನ್ನು ಸ್ವೀಕರಿಸಲಾಯಿತು. ಪ್ರಶಸ್ತಿ ವಿತರಣೆ ಸಮಾರಂಭವು ಡಿ 12, 2006ರಂದು ನಡೆತು. ಕಳೆದ ವರ್ಷದಂತೆ 14 ಶಿಕ್ಷಕರು, 7 ಶಾಲೆಗಳು ಮತ್ತು 14 ವಿದ್ಯಾರ್ಥಿಗುಂಪುಗಳಿಗೆ, ಅವರ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಗೌರವಿಸಲಾಯಿತು. ಶಿಕ್ಷಣ ಮಂತ್ರಿಗಳು ಈ ಬಾರಿಯ ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

2006ರಲ್ಲಿ 400ಕ್ಕೂ ಹೆಚ್ಚು ಪ್ರವೇಶಗಳನ್ನು ಸ್ವೀಕರಿಸಲಾಗಿದೆ. ಪ್ರಶಸ್ತಿ ವಿತರಣೆ ಸಮಾರಂಭವು ಆಗಸ್ಟ್–2007ರಲ್ಲಿ ನಡೆಯುವ ಸಾಧ್ಯತೆ ಇದೆ. ಕಳೆದ ವರ್ಷದಂತೆ 14 ಶಿಕ್ಷಕರು, 7 ಶಾಲೆಗಳು ಮತ್ತು 14 ವಿದ್ಯಾರ್ಥಿಗುಂಪುಗಳಿಗೆ, ಅವರ ಕಾರ್ಯಕ್ಷಮತೆಯನ್ನು ಗೌರವಿಸಲಾಗುವುದು. ಶಿಕ್ಷಣ ಮಂತ್ರಿಗಳು & ಮುಖ್ಯಮಂತ್ರಿಗಳು ಈ ಬಾರಿಯ ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಲಿದ್ದಾರೆ.

* **ಐಎಂಆರ್‌ಬಿ ಸಮೀಕ್ಷೆ :** ಯೋಜನೆಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಲು

ಶಿಕ್ಷಣದಲ್ಲಿ ಪರಿಣಾಮಕಾರಿಯಾಗಿ ಐಸಿಟಿ ಬಳಕೆಯ ಬಗ್ಗೆ ವಾರ್ಷಿಕ ಗುಣಾತ್ಮಕ ವಿಶ್ಲೇಷಣೆ


ವರದಿಯ ಪ್ರಕಾರ ಕಳೆದ ವರ್ಷದಿಂದ ಶಿಕ್ಷಕರು ತಂತ್ರಜ್ಞಾನ ಬಳಕೆಯಲ್ಲಿ ಸ್ಥಿರತೆ ಕಂಡುಬಂದಿದೆ , ಶೇ 83% ಶಿಕ್ಷಕರು, ತಾವು ನಿರಂತರ ತಂತ್ರಜ್ಞಾನ ಬಳಸುತೇವೆ ಎಂದು ತಿಳಿಸಿದ್ದಾರೆ.

ಯೋಜನೆಯು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಧನಾತ್ಮಕ ಪರಿಣಾಮ ಬೀರಿದೆ ಎಂದು ಶೇ 86% ರಷ್ಟು ಶಾಲೆಗಳ ಮುಖ್ಯ ಶಿಕ್ಷಕರು ನಂಬುತ್ತಾರೆ.

ವಿಷಯ ಅಧ್ಯಯನಕ್ಕೆ (ಗುಣಾತ್ಮಕ ಅಧ್ಯಯನಕ್ಕೆ) ಬೆಂಗಳೂರಿನ ಸರ್ಕಾರಿ ಪ್ರೌಢ ಶಾಲೆ, ಪೀಣ್ಯ ಹಾಗೂ ಸರ್ಕಾರಿ ಪ್ರೌಢ ಶಾಲೆ, ಯಶವಂತಪುರ ಶಾಲೆಗಳನ್ನು ಆರಿಸಿಕೊಳ್ಳಲಾಯಿತು.



## ಓದಿನ ಮನೆ




**ಹೊಸದಿಸೆಯ ಬೆಳಕು –**
ಬೋಧನೆ ಮತ್ತು ಕಲಿಕೆಯ ಸಾಮಗ್ರಿ,
ಶಾಲಾ ಶಿಕ್ಷಕರಿಗಾಗಿ ಸಚಿತ್ರ ಮಾಹಿತಿ ಕೈಪಿಡಿ.
ಲೇಖಕ – **ನೀಲಾವರ ಸುರೇಂದ್ರ ಅಡಿಗ,**
ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ಕೇಂದ್ರ
ಉಡುಪಿ ವಲಯ, ಸೆಲ್ – 9242139645

ಇಲ್ಲಿರುವ ಚಟುವಟಿಕೆ ಮೂಲಕ ಶಿಕ್ಷಕರು ತರಗತಿಯೊಳಗೆ ಸಂತಸದಾಯಕ ವಾತಾವರಣದಲ್ಲಿ ಮಕ್ಕಳಿಗೆ ಸ್ವಕಲಿಕೆಯ ಮೂಲಕ ಕಲಿಸುವ ವಾತಾವರಣ ನಿರ್ಮಾಣ ಮಾಡಬಹುದಾಗಿದೆ. ಸರ್ವಶಿಕ್ಷಣ ಅಭಿಯಾನಯದ ಮುಖ್ಯಗುರಿ ಇಲ್ಲಿ ಸಾಕಾರ ರೂಪ ಪಡೆದಿದೆ. (ಪುಸ್ತಕದ ಹಿನ್ನುಡಿಯಲ್ಲಿ)

– ಡಿ.ಮಂಜುನಾಥಯ್ಯ, ಕ್ಷೇತ್ರಶಿಕ್ಷಣಾಧಿಕಾರಿಗಳು ಉಡುಪಿ

**ಪ್ರಕಾಶಕರು :** ಅಳಿಲು ಸೇವಾಸಂಸ್ಥೆ, ನಂ.133, ಮೊದಲನೇ ಮಹಡಿ , ಕೆ.ಆರ್. ರಸ್ತೆ, ಓಬಳಪ್ಪ ಗಾರ್ಡನ್, ಬೆಂಗಳೂರು 560082, ಫೋನ್: 26763373,

**ಬೆಲೆ : ರೂ.80/–**

# ವಿದ್ಯಾರ್ಥಿಗಳಿಗೆ ವೈವಿಧ್ಯಮಯ ತರಬೇತಿಗಳು

21.3.2007 ರಿಂದ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರವಾಗಿ ನಂತರ 29.3.2007ರ ಬಳಿಕ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರವಾಗಿ ಒಂದು ಶಾಲೆಯನ್ನು ಆಯ್ದುಕೊಳ್ಳಲಾಗಿತ್ತು. ಈ ಎರಡೂ ಕಾರ್ಯಗಳಲ್ಲಿ ಶಾಲಾ ಶಿಕ್ಷಕ ವೃಂದಕ್ಕೆ ಹಲವು ಬಗೆಯ ಹೊಣೆಗಳು 220 ಶಾಲಾ ದಿನಗಳನ್ನು ಖಾತರಿ ಪಡಿಸುವ ಜವಾಬ್ದಾರಿ ಕೂಡಾ ಮುಖ್ಯ ಶಿಕ್ಷಕರ ಹೆಗಲ ಮೇಲೆ, ಇಂತಹ ಇಕ್ಕಟ್ಟಿನ ಸನ್ನಿವೇಶದಲ್ಲಿ ಹಾಜರಿ ಪುಸ್ತಕದಲ್ಲಿ ಮಾತ್ರ ಶಾಲಾ ದಿನಗಳನ್ನು ನಮೂದಿಸಿ ಕೈ ಚೆಲ್ಲುವ ಮಂದಿಯೇ ಹೆಚ್ಚು. ಇದನ್ನೊಂದು ಸವಾಲಾಗಿ ಸ್ವೀಕರಿಸಿ, ವಿದ್ಯಾರ್ಥಿಗಳ ಮೂರನೇ ತ್ರೈಮಾಸಿಕ ಪರೀಕ್ಷೆಗಳು ಪೂರ್ಣಗೊಂಡ ಬಳಿಕವೂ ಅವರು ಶಾಲೆಗ ನಿಯಮಿತವಾಗಿ ಬರುವಂತೆ ಮಾಡುವುದು, ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವ ಅಪೂರ್ವವಾದ ಪ್ರಯತ್ನವು ವಳಕಾಡು ಸರಕಾರಿ ಪ್ರೌಢಶಾಲೆಯಲ್ಲಿ ನಡೆದು ಬಂದಿದೆ.

8 ಮತ್ತು 9ನೇ ತರಗತಿಯ ಮೂರನೇ ತ್ರೈಮಾಸಿಕ ಪರೀಕ್ಷೆಗಳನ್ನು 20.3.2007ಕ್ಕೆ ಮುಗಿಸಲಾಯಿತು. ಆ ಬಳಿಕ ಶಾಲಾ ಶಿಕ್ಷಕರಿಗೆ ಕೊಠಡಿ ಮೇಲ್ವಿಚಾರಕರಾಗಿ, ನಂತರ ಮೌಲ್ಯಮಾಪಕರಾಗಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿಗಳು. ಸರಕಾರ ನಿಗದಿ ಪಡಿಸಿದಂತೆ 10.4.2007 ಕಡೆಯ ಶಾಲಾ ದಿನ. ಈ ನಿಟ್ಟಿನಲ್ಲಿ 20ಕ್ಕೆ ಮಿಕ್ಕಿ ಶಾಲಾ ದಿನಗಳನ್ನು ವ್ಯರ್ಥವಾಗಿ ಕಳೆಯುವಂತೆ ಮಾಡುವುದು ಅನಿವಾರ್ಯವೆಂಬಂತಹ ಪರಿಸ್ಥಿತಿ. ಇದನ್ನು ನಿಭಾಯಿಸಲು ತಿಂಗಳು ಮೊದಲೇ ನಡೆದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಭೆಯಲ್ಲಿ ವಿಶೇಷ ಚರ್ಚೆ. ವಿಶೇಷವಾದ ತರಬೇತಿಗಳನ್ನು ಸಂಘಟಿಸುವಂತೆ ಮುಖ್ಯ ಶಿಕ್ಷಕರಿಗೆ ಸಲಹೆ. ಅಂತೆಯೇ ಆರಂಭಗೊಂಡದ್ದು ಐದಾರು ಬಗೆಯ ತರಬೇತಿಗಳು.

* **ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ :** ದಿನಾಂಕ 21.3.2007ರಿಂದ ಆರಂಭ. ಪ್ರತಿದಿನ ಅಪರಾಹ್ನ 2.30 ಯಿಂದ 4.00 ಗಂಟೆವರೆಗೆ, ಪಾಲ್ಗೊಂಡ ವಿದ್ಯಾರ್ಥಿಗಳ ಸಂಖ್ಯೆ 125 (9ನೇ ತರಗತಿಯ 60 ಮತ್ತು 8 ನೇ ತರಗತಿಯ 65 ವಿದ್ಯಾರ್ಥಿಗಳು) ಸಂಪನ್ಮೂಲ ವ್ಯಕ್ತಿಯಾಗಿ ಜಯಕಿಶನ್ ಎಂಬ ನುರಿತ ಶಿಕ್ಷಕರು. ಬೆಂಗಳೂರಿನ ರೀಜನಲ್ ಇನ್ಸಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಈ ಸಂಸ್ಥೆಯು ಎಜುಸ್ಯಾಟ್ ಶಿಕ್ಷಣಕ್ಕಾಗಿ ಸಿದ್ಧಪಡಿಸಿರುವ ಸಿಡಿಗಳ ಬಳಕೆ. ಆರಂಭ ಹಾಗೂ ಅಂತ್ಯದಲ್ಲಿ ವಿದ್ಯಾರ್ಥಿಗಳಿಗೆ ಆಕರ್ಷಕ ಚಟುವಟಿಕೆಗಳು ಇಂಗ್ಲಿಷ್ ಶಿಕ್ಷಕಿಯರಾದ ಗಿರಿಜಾ ಮತ್ತು ಶಾಂತಿ ಇವರಿಂದ ಮೇಲುಸ್ತುವಾರಿ.

* **ನಾಟಕ ತರಬೇತಿ :** ಸಾಗರ ತಾಲ್ಲೂಕಿನ ತುಮುರಿಯ ಕಿನ್ನರ ಮೇಳ ತಂಡದ ಕಲಾವಿದರಾದ ಭವಾನಿ ಹಾಗೂ ಉಮೇಶ್ ರವರಿಂದ ದಿನಾಂಕ 23.3.2007 ರಿಂದ 10.4.2007ರವರೆಗೆ ನಾಟಕ ತರಬೇತಿ. ಪಾಲ್ಗೊಂಡ ವಿದ್ಯಾರ್ಥಿಗಳ ಸಂಖ್ಯೆ 40. ಸಮಯ ಪ್ರತಿದಿನ ಅಪರಾಹ್ನ 2.00 ರಿಂದ 5.00 ಗಂಟೆವರೆಗೆ. ದಿನಾಂಕ 10.4.2007 ರಂದು ನಡೆದ ಸಮುದಾಯ ದತ್ತ ಶಾಲೆ ಕಾರ್ಯಕ್ರಮದಲ್ಲಿ ಮಕ್ಕಳಿಂದ ನಾಟಕ ಪ್ರದರ್ಶನ. ಅಲ್ಲದೇ ಅದೇದಿನ ರಾತ್ರಿ ಉಡುಪಿ ಕೃಷ್ಣ ಮಠದ ರಾಜಾಂಗಣದಲ್ಲಿ ಈ ಮಕ್ಕಳು ಅಭಿನಯಿಸಿದ **'ಗಿಳಿಯಾದ ಮಂತ್ರವಾದಿ'** ರಾತ್ರಿ ಉಡುಪಿ ನಾಟಕವನ್ನು ವೀಕ್ಷಿಸಿ 500 ಕ್ಕೂ ಮಿಕ್ಕಿ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.



* **ಚಿತ್ರಕಲಾ ತರಬೇತಿ :** ದಿನಾಂಕ 21.3.2007 ರಿಂದ ಆರಂಭ. ಅವಧಿ ಪ್ರತಿದಿನ ಅಪರಾಹ್ನ 2.30 ರಿಂದ 4.00 ಗಂಟೆವರೆಗೆ, ಹಿರಿಯ ಕಲಾವಿದ ಮತ್ತು ಚಿತ್ರಕಲಾ ಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಯು.ಎಲ್.ಭಟ್ ಸಂಪನ್ಮೂಲ ವ್ಯಕ್ತಿ. 75ಕ್ಕೆ ಮಿಕ್ಕಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ. ಚಿತ್ರಕಲಾ ಶಿಕ್ಷಕ ರಾಧಾಕೃಷ್ಣ ಉಪಾಧ್ಯಾಯ ಇವರ ಮೇಲುಸ್ತುವಾರಿ.

* **ಗಣಕ ತರಬೇತಿ :** ಶಾಲೆಯ ಇ-ಕ್ಲಬ್ ಸದಸ್ಯರಾಗಿ ಶ್ರಮಿಸುತ್ತಿರುವ ಸುಮಾರು 30 ವಿದ್ಯಾರ್ಥಿಗಳಿಗೆ ದಿನಾಂಕ 21.3.2007ರಿಂದ ಆರಂಭ. ಅವಧಿ ಪ್ರತಿದಿನ ಅಪರಾಹ್ನ 2.30 ಯಿಮದ 4.00 ಗಂಟೆವರೆಗೆ, ಬ್ರಾಡ್ ಬ್ಯಾಂಡ್ ಸಂಪರ್ಕದ ಸದುಪಯೋಗಕ್ಕೆ ಪ್ರೋತ್ಸಾಹ ನೀಡಿದ್ದು ಶಾಲೆಯ ಮಾಹಿತಿ ಸಿಂಧು ಶಿಕ್ಷಕಿ ಶ್ರೀಮತಿ ಶ್ರೀಲತಾ.

* **ಖೋ-ಖೋ ತರಬೇತಿ :** ದಿನಾಂಕ 21.3.2007 ರಿಂದ ಆರಂಭ ಅವಧಿ ಪ್ರತಿದಿನ ಮಧ್ಯಾಹ್ನ 3.00 ಗಂಟೆ ಬಳಿಕ ಶಾಲಾ ಮೈದಾನದಲ್ಲಿ.

* **ವಾಲಿಬಾಲ್ ತರಬೇತಿ :** ದಿನಾಂಕ 21.3.2007ರಿಂದ ಆರಂಭ. ಅವಧಿ ಪ್ರತಿದಿನ ಬೆಳಿಗ್ಗೆ 8.00 ರಿಂದ 10.00 ಗಂಟೆವರೆಗೆ, ಶಾಲಾ ಮೈದಾನದಲ್ಲಿ.

* **ಫುಟ್ಬಾಲ್ ತರಬೇತಿ :** ದಿನಾಂಕ 21.3.2007 ರಿಂದ ಆರಂಭ. ಅವಧಿ ಪ್ರತಿದಿನ ಬೆಳಿಗ್ಗೆ 8.00 ರಿಂದ 10.00 ಗಂಟೆವರೆಗೆ ಅಜ್ಜರಕಾಡು ಮೈದಾನದಲ್ಲಿ. ಈ ಎಲ್ಲಾ ಕ್ರೀಡಾ ತರಬೇತಿಗಳು ದೈಹಿಕ ಶಿಕ್ಷಣ ಶಿಕ್ಷಕ ಸುಭಾಶ್ಚಂದ್ರ ಹೆಗ್ಡೆ ಇವರ ಉಸ್ತುವಾರಿಯಲ್ಲಿ ಯಶಸ್ಸು ಕಂಡವು. ಮುಂದಿನ ವರ್ಷದ ತಂಡಗಳು ಸ್ಥೂಲವಾಗಿ ರೂಪುಗೊಂಡವು.

ಹೀಗೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಒಂದಿಲ್ಲೊಂದು ಚಟುವಟಿಕೆಯಲ್ಲಿ ಕಡ್ಡಾಯವಾಗಿ ಪಾಲ್ಗೊಂಡರು. ಸಂತಸದಾಯಕ ಕಲಿಕಾ ವಾತಾವರಣದಲ್ಲಿ ತೊಡಗಿಕೊಂಡರು. ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಕೃಷಿಯನ್ನು ಮಾಡಿದರು.

**ಆರ್ಥಿಕ ವ್ಯವಸ್ಥೆ :** ಸುಮಾರು 325 ವಿದ್ಯಾರ್ಥಿಗಳು ತಲಾ 20/- ರೂ.ನಂತೆ ತರಬೇತಿ ಶುಲ್ಕ ಪಾವತಿಸಿದರು. ಇದಲ್ಲದೆ ರೆಡ್ ರಿಬ್ಬನ್ ಕ್ಲಬ್‌ನ ಚಟುವಟಿಕೆಗಳಿಗಾಗಿ ದೊರೆತ ಅನುದಾನ ರೂ. 3.500/-ನ್ನು ಈ ತರಬೇತಿಗಾಗಿ ಅಲ್ಲದೇ ತರಬೇತಿಗಳ ಅನುಪಾಲನೆಗಾಗಿ ಏರ್ಪಡಿಸಿದ್ದ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಚಿತ್ರ ಕಲಾ ಸ್ಪರ್ಧೆಗಳ ಬಹುಮಾನ ವಿತರಣೆಗಾಗಿ ಬಳಸಲಾಯಿತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯೂ ಕೂಡಾ ಸೂಕ್ತ ಅನುದಾನದೊಡನೆ ಪ್ರೋತ್ಸಾಹವನ್ನು ನೀಡಿತು. ವಿದ್ಯಾರ್ಥಿಗಳು ಮತ್ತು ಪೋಷಕರೂ ಈ ತರಬೇತಿ ಕಾರ್ಯಕ್ರಮವನ್ನು ಮುಕ್ತವಾಗಿ ಶ್ಲಾಘಿಸಿದರು.

**- ಅಶೋಕ ಕಾಮತ್**
ಮುಖ್ಯೋಪಾಧ್ಯಾಯರು
ಸ.ಪ್ರೌ.ಶಾ. ವಳಕಾಡು ಉಡುಪಿ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ : ಸಿ2(3) ದೂರು 1/2007-08 ದಿನಾಂಕ : 07-05-2007

**ವಿಷಯ :** **ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಯುವ ಸಲುವಾಗಿ ದೂರು ನಿವಾರಣಾ ಸಮಿತಿ ರಚಿಸುವ ಬಗ್ಗೆ.**

**ಉಲ್ಲೇಖ :**
1. **ಈ ಕಛೇರಿಯ ಸಮಸಂಖ್ಯೆಯ ಜ್ಞಾಪನ ದಿನಂಕ 08-11-2000 ಹಾಗೂ ಸುತ್ತೋಲೆ ದಿನಾಂಕ : 12-01-2006**
2. **ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ : ಶಿ.ರಾ ಪ್ರಾ ಪ್ರೌ ಶಿ/ಆ ಶಾ 838/ 2005 ದಿ: 07-10-2005.**

ದಿನಾಂಕ 13-08-1997 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ, ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಆಗುತ್ತಿರುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಮತ್ತು ಯಾವುದೇ ರೀತಿಯ ದೂರನ್ನು ಪರಿಹರಿಸಲು, ನೀಡಿರುವ ಮಾರ್ಗಸೂಚಿಗಳನ್ವಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಾರ್ಯಾಲಯಗಳ ಹಂತದಲ್ಲಿ ಲೈಂಗಿಕ ಕಿರುಕುಳದ ದೂರುಗಳ ಬಗ್ಗೆ ವಿಚಾರಣೆ ನಡೆಸಲು ಹಾಗೂ ತಡೆಗಟ್ಟಲು, ಸಮಿತಿಯನ್ನು ಪುನರ್ ರಚಿಸುವಂತೆ ಉಲ್ಲೇಖ-1 ರಲ್ಲಿನ ದಿನಾಂಕ : 02-01-2006ರ ಈ ಕಛೇರಿಯ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ಇಂತಹ ಸಮಿತಿಯನ್ನು ಎರಡು ವರ್ಷಗಳಿಗೊಮ್ಮೆ ಪುನರ್ ರಚಿಸುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ. ಇದಲ್ಲದೆ, ಸುತ್ತೋಲೆಯೊಡನೆ ನಿಬಂಧನೆ ಮತ್ತು ಮಾರ್ಗದರ್ಶನ ಸೂತ್ರಗಳನ್ನು, ಲೈಂಗಿಕ ದೌರ್ಜನ್ಯದ ಬಗ್ಗೆ ಅರಿವನ್ನು ಮೂಡಿಸುವ ಪೋಸ್ಟರ್‌ಗಳನ್ನು ಸಹ ಒದಗಿಸಲಾಗಿರುತ್ತದೆ. ಒಂದು ವೇಳೆ ನಿರ್ದೇಶನಗಳನ್ನು ಅಲಕ್ಷಿಸಿ ಸಮಿತಿಯನ್ನು ರಚಿಸದೇ ಇದ್ದಲ್ಲಿ ನ್ಯಾಯಾಲಯದ 2004ರ ತೀರ್ಪಿನಂತೆ ನ್ಯಾಯಾಲಯದ ನಿಂದನೆ ಆಗುತ್ತದೆಯೆಂಬುದಾಗಿಯೂ ತಿಳಿಸಿ, ಸಂಬಂಧಿಸಿದ ಆಯಾ ಕಛೇರಿಗಳಲ್ಲಿ ಸಮಿತಿಯನ್ನು ರಚಿಸಿ, ಈ ಸಮಿತಿಯ ವಿವರಗಳನ್ನು ಪ್ರದರ್ಶಿಸುವ ಮೂಲಕ ಪ್ರಚಾರ ಮಾಡುವಂತೆಯೂ, ತಪ್ಪಿದಲ್ಲಿ ಶಿಸ್ತಿನ ಕ್ರಮಕ್ಕೆ ಗುರಿಪಡಿಸಲಾಗುತ್ತದೆಂದೂ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಂಕ 12-01-2006ರ ಈ ಕಛೇರಿಯ ಸುತ್ತೋಲೆಯ ಅನ್ವಯ ಮತ್ತೊಮ್ಮೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಹಂತದ ಆಯುಕ್ತಾಲಯಗಳು, ನಿರ್ದೇಶನಾಲಯಗಳು, ವಿಭಾಗೀಯ ಕಾರ್ಯದರ್ಶಿಗಳ ಕಛೇರಿಗಳು, ಸಿಟಿಇ., ಡಯಟ್‌ಗಳು, ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಲೈಂಗಿಕ ಕಿರುಕುಳ ದೂರು ನಿವಾರಣಾ ಸಮಿತಿಯನ್ನು ಕೂಡಲೇ ಪುನರ್ ರಚಿಸಿ, ಕಾರ್ಯೋನ್ಮುಖವಾಗುವಂತೆ ಆದೇಶಗಳನ್ನು ಹೊರಡಿಸುವಂತೆ ತಿಳಿಸಿದೆ. ಅಲ್ಲದೆ, ರಚಿಸಲ್ಪಡುವ ಸಮಿತಿಯ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವ ಮೂಲಕ ಪ್ರಚಾರ ಮಾಡುವಂತೆಯೂ ಸೂಚಿಸಿದೆ.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಿದೆ)

**(ಬಿ. ನಂಜುಂಡೇಶ್ವರ)**

ಸಹ ನಿರ್ದೇಶಕರು (ಆಡಳಿತ)ಆಯುಕ್ತರ ಪರವಾಗಿ

**ನಿರ್ದೇಶಕರ ಕಚೇರಿ, ಡಿ.ಎಸ್.ಇ.ಆರ್.ಟಿ. ನಂ. 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 560 085**

**ವಿಷಯ : ಅಮೂಲ್ಯ ಅಡಿಯೋ ಸಂಸ್ಥೆ, ಬೆಂಗಳೂರು ಇವರು ಹೊರತಂದಿರುವ ಬಾ ಬಾಲೆ ಶಾಲೆಗೆ ಗೀತಗುಚ್ಛ ಧ್ವನಿ ಸುರುಳಿಯನ್ನು ಶಾಲೆಗಳಲ್ಲಿ ಸಂಚಿತ ನಿಧಿಯಿಂದ ಕೊಳ್ಳಲು ಅನುಮತಿ ನೀಡುವ ಬಗ್ಗೆ.**

**ಉಲ್ಲೇಖ : 1. ವ್ಯವಸ್ಥಾಪಕ ನಿರ್ದೇಶಕರು, ಅಮೂಲ್ಯ ಆಡಿಯೋ, 5ನೇ ಹಂತ, ಯಲಹಂಕ ಉಪನಗರ, ಬೆಂಗಳೂರು–64 ಇವರ ಪತ್ರ ದಿ: 8.12.2006.**

**2. ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಪತ್ರ ದಿನಾಂಕ 24.1.2007.**

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಈ ತಲೆಮಾರಿನ ವಿದ್ಯಾರ್ಥಿ ಸಮುದಾಯಕ್ಕೆ ನಾಡ–ನುಡಿ ಶಿಕ್ಷಣ, ಭುವಿಯ ಪರಿಸರ ಇವುಗಳ ಮಹತ್ವ ಮತ್ತು ಅಗತ್ಯತೆಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಅಮೂಲ್ಯ ಆಡಿಯೋ ಸಂಸ್ಥೆ, ಬೆಂಗಳೂರು ಇವರು ಬಾ ಬಾಲೆ ಶಾಲೆಗೆ ಎಂಬ ಧ್ವನಿ ಸುರುಳಿಯನ್ನು ರಚಿಸಿದ್ದು, ಹಾಗೂ ಶಾಲಾ ಸಂಚಿತ ನಿಧಿಯಿಂದ ಖರೀದಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

ಪ್ರಯುಕ್ತ ಈ ಸಂಸ್ಥೆಯವರು ರಚಿಸಿದ ಬಾ ಬಾಲೆ ಶಾಲೆಗೆ ಧ್ವನಿ ಸುರುಳಿಗಳನ್ನು ಶಾಲೆಗಳಲ್ಲಿನ ಸಂಚಿತ ನಿಧಿಯಿಂದ ಈ ಧ್ವನಿ ಸುರುಳಿ ಖರೀದಿಸಲು ತಿಳಿಸಿದೆ. ಹಾಗೂ ಜಿಲ್ಲೆಯ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸಂಬಂಧಪಟ್ಟ ಶಾಲೆಗಳಿಗೆ ಸೂಕ್ತ ಆದೇಶ ನೀಡಲು ಆದೇಶಿಸಿದೆ.

**ಸಹಿ/–**
ನಿರ್ದೇಶಕರು
(ಸಂ. ಮತ್ತು ತ)

# Notification

No. ED 13 SES 2006, Bangalore, Dated : 17th April, 2007

Whereas, the draft of the Karnataka Educational Institutions (Change in the Governing Council or Change in the Location of Private Educational Institutions) Rules, 2006, was published as required by sub-section (1) of section 145 of the Karnataka Education Act, 1983 (Karnataka Act 1 of 1995) in Notification No. ED 13 AES 2006, dated : 29-08-2006 in Part IV-A in No. 1094 of the Karnataka Gazette Extraordinary dated 29-08-2006 inviting objections and suggestions from the persons likely to be affected thereby :-

Whereas, the said Gazette was made available to the public on 20-08-2006 ;

Whereas, the suggestion received in this regard has been considered by the Government.

Now, therefore, in exercise of the powers conferred by sub-section (1) of Section 145 of the Karnataka Education Act, 1983 (Karnataka Act 1 of 1995), the Government of Karnataka hereby makes the following rules, namely :-

Rules

1. Title, application and commencement :- 1) These rules may be called the Karnataka Educational Insititutions) Rules, 2006.

2. These rules shall apply to the private educational Institutions imparting primary, secondary and pre-university educationa.

3) They shall come into force from the date of their publication in the Official Gazette.

2. Definitions :- 1) In these rules, the context otherwise requires :-

a) 'Act' means the Karnataka Education Act, 1983 (Karnataka Act 1 of 1995);

b) 'Section' means a section of the Act.

3. Procedure for change in the governing council or change in the location of private educational institutions :- 1) Applications seeking change in the governing council or change in the lication of private educational institutions shall be filed in person or through registered post acknowledgement due; before the competent authority, every year in the month of October only;

Private that in case of extreme urgency such applications may be filed any time in the academic year.

2) Every such application for change in the governing council or change in the location of a private educational institution specified in column 2) of the table below shall be accompanied by proof of having paid the application fee as specified in the corresponding entry in coloumn 3) thereof. The fee shall be paid in the form of demand draft drawn not earlier than one month prior to the date of application and in favour of the competent authority. The demand draft shall be made payable at the branch of the Bank located in the headquarters of the said authority or in the surrounding locality.

| Sl. No. | Class of Private Educational Institutions | | Application fee to be paid for change in the location of a private educational institution | Application fee to be paid for change in the governing council of a private educaitonal institution |
|---|---|---|---|---|
| (1) | (2) | (3) | (4) | |
| 1. | Primary Schools | 20,000 | 40,000 | |
| 2. | Secondary Schools | 30,000 | 60,000 | |
| 3. | Pre-University Colleges | 40,000 | 80,000 | |
| 4. | Vocational Courses | 10,000 | 20,000 | |

3) The fee received under sub-rule (2) shall not be refunded under any circumstances and it shall be credited to the consolidated fund of the State by the competent authority.

4) Every such application shall also be accompanied by the following documents, namely:-

a) Certified copy of the resolutions passed by the present governing council and the one intending take over the private educational institution with regard to the change in governing council;

b) Certified copy of the agreement entered into between the present governing council and the one intending to take over the private educational institution, inter alia, agreeing to the transfer of the private educational institution with its assets, liabilities and staff and take over the same;

c) An undertaking by the governing council intending to take over the private educational institution to the effect that it shall provide and maintain the infrastructure and other facilities prescribed; and

d) Such others documents etc., as may as specified by Government by orders and instructions issued in this behal from time to time.

5) The competent authority shall verify the suitability and eligibility of each application in

accordance with the providions of these rules. He shall grant permission to the governing council for the change sought or the refusal order, as the case may be, within a period of 60 days from the date of receipt of the application.

6) The refusal order shall indicate the reasons for refusal.

**4. Conditions for change in the governing council of private educational institutions :-**

1) Every application seeking change in the council shall contain specific reasons in support thereof, which shall be in the public interest and in the interest of the students in providing good education an dfacilities.

2) No change in the governing council shall be permitted, if the same is sought with commercial motives:

Provided that if the existing governing council is not able to provide the infrastructure and other pescribed facilities, if may seek change in the governing council, if the governing council intending to take over the private educaitonal institution undertakes to privide and maintain the same.

3) The governing council intending to take over the private educational institution should be financially good enough to be run the institution and it should be running at least one recognized primary school or high school or preuniversity college.

4) If the competent authority permits chan ge in the governing council, a fresh application for registration and recognition shall be made s if it were a newly started institution.

5) No change of governing council shall be permissible more than once.

6) The governing council taking over the institution shall continue with the students existing under the governing council transferring the institution. The staff appointed as per the staffing pattern, who are existing under the governing council transferring the institution, shall be continued by the governing council taking over the institution.

5. Conditions for cha£Àge in the location of the private educational institutions :- 1) No Change in the location of a private educational institution located within the limits of an urban agglomeration, city corporation, city municipal council, town muncipal council, town panchayat shall be permitted beyond the limits of such urban agglomeration or city corporation or city muncipal council or town municipal council or town panchayat, as the case may be :-

Provided that change in the location of a private educational institution may be permitted from a place in one gram panchayat area, where it is located, to another place either within the same gram panchayat area or some other gram panchayat area, which does not fall within the limits of any urban agglomeration.

2) Change the location shall be permitted by the competent authority only if the governing council has provided all the facilities prescribed at the new location.

3) Ordinarily, change in the location of the institution shall not be permitted more than once.

4) The governing council shall ensure that no inconvenience is caused to the students in case change in location is permitted.

5) If the competent authority permits change in the location, a fresh application for registration and recognition shall be made as if it were a newly started institution.

By order and in the name of the Governor of Karnataka.

Siddalingaiah
Under Secretary to Government,
Education Department.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ :ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿದ ಭೂಮಿ ಹಾಗೂ ಇವುಗಳನ್ನು ಸಂರಕ್ಷಿಸುವ ಬಗ್ಗೆ.**

**ಓದಲಾಗಿದೆ:** ದಿನಾಂಕ 24-04-2007ರಂದು ವಿಧಾನಸಭೆಯ ಜಂಟಿ ಸದನ ಸಮಿತಿಯ ಸಭೆ.

---

**ಪ್ರಸ್ತಾವನೆ :**

ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲಾ, ಕಾಲೇಜು, ಕಛೇರಿಗಳಿಗೆ ಸರ್ಕಾರಿ ಭೂಮಿ ಒತ್ತುವರಿಯಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಕುರಿತಂತೆ ದಿನಾಂಕ 24-04-2007ರಂದು ನಡೆದ ವಿಧಾನ ಸಭೆಯ ಜಂಟಿ ಸದನ ಸಮಿತಿ ಸಭೆಯಲ್ಲಿ, ಚರ್ಚಿಸಿದ ನಂತರ ಒತ್ತುವರಿಯಾದ ಸರ್ಕಾರಿ ಜಮೀನನ್ನು ತ್ವರಿತವಾಗಿ ತೆರವು ಮಾಡಲು ಕ್ರಮ ಜರುಗಿಸುವುದರ ಜೊತೆಗೆ ಸರ್ಕಾರಿ ಜಮೀನು ಅತಿಕ್ರಮಣ ಆಗದಂತೆ ತಡೆಗಟ್ಟಲು ಇಲಾಖೆಯ ಜಮೀನುಗಳನ್ನು ದಾಖಲೀಕರಣ, ಭೂಮಾಪನ, ಸಂರಕ್ಷಣೆ ಮಾಡಲು ಅವಶ್ಯ ಕ್ರಮ ಜರುಗಿಸುವಂತೆ ಸಮಿತಿ ಸೂಚಿಸಿರುತ್ತದೆ.

ಆ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : 56 ವಿವಿಧ 2006,**

ಬೆಂಗಳೂರು, ದಿನಾಂಕ 03-05-2007

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಶಾಲೆಗಳು ಹಾಗೂ ಇಲಾಖಾ ಕಛೇರಿಗಳ ಭೂಮಿ ಹಾಗೂ ಇತರೆ ಆಸ್ತಿಗಳು ಅತಿಕ್ರಮವಾಗದಂತೆ ತಡೆಗಟ್ಟುವ ಸಲುವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಶಿಕ್ಷಣಾಧಿಕಾರಿಯನ್ನು, ಜಿಲ್ಲಾ ಮಟ್ಟದಲ್ಲಿ, ಮತ್ತು ಕ್ಷೇತ್ರ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯನ್ನು (Estate Officer)'ಎಸ್ಟೇಟ್ ಆಫೀಸರ್' ಆಗಿ ನೇಮಕ ಮಾಡಲಾಗಿದೆ.

ಸದರಿ ಅಧಿಕಾರಿ ಈ ಕೆಳಗಿನ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

1) ಜಿಲ್ಲಾ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲೆ ಹಾಗೂ ಕಛೇರಿಯ ಭೂಮಿ ಮತ್ತು ಕಛೇರಿಗಳ ಸ್ಥಿರಾಸ್ತಿ ವಿವರಗಳನ್ನೊಳಗೊಂಡ ವಹಿ (ರಿಜಿಸ್ಟಾರ್) ನಿರ್ವಹಿಸುವುದು.
2) ಅಂತಹ ಭೂಮಿಗಳ, ಕಛೇರಿಗಳ ಭೂ ದಾಖಲೆಗಳ ಪ್ರತಿಯನ್ನು ಇಡುವುದು.
3) ಭೂ ದಾಖಲೆಯ ಪ್ರಕಾರ ಇಲಾಖೆಯ ಹೆಸರಿನಲ್ಲಿ ಸದರಿ ಸ್ಥಿರಾಸ್ತಿ ಇಲ್ಲದಿದ್ದರೆ ಇಲಾಖೆಯ ಹೆಸರನ್ನು ನಮೂದಿಸಲು ಅಗತ್ಯ ಕ್ರಮ ಜರುಗಿಸುವುದು.
4) ಅಂತಹ ಭೂಮಿಗಳ ಅವಶ್ಯವಿದ್ದಲ್ಲಿ ಭೂಮಾಪನ ಇಲಾಖೆಯಿಂದ ಸರ್ವೇ ಮಾಡಿಸಿ, ಸರಿಯಾದ ಭೂಮಾಪನ ದಾಖಲೆಗಳ ಪ್ರತಿಗಳನ್ನು ಹೊಂದುವುದು, ಸರ್ವೇ ಕಾರ್ಯಕ್ಕೆ ಅಗತ್ಯ ಅನುದಾನವನ್ನು ಇಲಾಖೆಯ ಸಂಬಳೇತರ ವೆಚ್ಚಗಳಲ್ಲಿ ಭರಿಸುವುದು.
5) ಖಾಲಿ ಜಮೀನು ಇದ್ದಲ್ಲಿ ಬೌಂಡರಿ ಗುರುತಿಸಿ ಇದು 'ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ ಆಸ್ತಿ ಎಂಬುದಾಗಿ ಫಲಕ ಹಾಕುವುದು.
6) ಅಂತಹ ಸಂಸ್ಥೆಗಳ ಭೂಮಿಯ ಸುತ್ತ ತಂತಿ ಬೇಲಿ ಅಥವಾ ಕಾಂಪೌಂಡ್‌ನ್ನು ನಿರ್ಮಿಸಲು ವಿವಿಧ ಸರ್ಕಾರಿ ಯೋಜನೆಗಳಡಿ ಹಿಂಬಾಲಿಸುವುದು.
7) ವಿವಿಧ ಶಾಲೆ ಹಾಗೂ ಕಛೇರಿಗಳು ಹೊಂದಿರುವ ಸ್ಥಿತಿ ಕುರಿತಂತೆ ಜಿಲ್ಲೆಯ ಉಪನಿರ್ದೇಶಕರು ಪ್ರತಿ ಆರು ತಿಂಗಳಿಗೊಮ್ಮೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಹಿ/-**

(ಎಸ್. ಎಂ. ನಂದಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ, (ಸಾಮಾನ್ಯ)